

# ಸರ್ವಮೂಲ ಸಂದೇಶ

–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು


ಸಂಪುಟ–೭ ಸಂಚಿಕೆ–೭ ಸರ್ವಧಾರಿ ಸಂ.॥ ಜ್ಯೇಷ್ಠ–ಆಷಾಢ ಜುಲೈ ೨೦೦೮


ಸಂಸ್ಥಾಪಕರು:

ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು


ಶ್ರೀವಿದ್ಯಾಮಾನ್ಯ ಪ್ರಕಾಶನ

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಅಂತರ್ಜಾಲ ವಿಳಾಸ

sarvamoola@udupishripalimarumatha.org


## ವಿಷಯಾನುಕ್ರಮಣಿಕೆ


| | | |
|---|---|---|
| ಉದ್ಧವಗೀತೆ | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| ವಿದ್ವತ್ ಪ್ರಪಂಚ | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| ವಿದುರನೀತಿ | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 5 |
| ಉಪನಿಷತ್ ಚಿಂತನ | ವಿ॥ ಬನ್ನಂಜೆ ಗೋವಿಂದಾಚಾರ್ಯ | 8 |
| ಮುಖಪುಟ ಲೇಖನ | ಶ್ರೀ ಬಿ. ಶ್ರೀನಿವಾಸಭಟ್ | 10 |
| ಭಾರತ ಭಾವದರ್ಪಣ | ವಿ॥ ರಾಮವಿಟ್ಠಲಾಚಾರ್ಯ | 11 |
| ಹರಿಭಕ್ತಿಸಾರ– | ವಿ॥ ಹಯವದನ ಪುರಾಣಿಕ | 13 |
| ಉಪನಿಷತ್ ಸಂದೇಶ | ಡಾ॥ ಎನ್. ವೆಂಕಟೇಶ್ | 16 |
| ಅವಲೋಕನ | ವಿ॥ ಸಗ್ರಿ ರಾಘವೇಂದ್ರಾಚಾರ್ಯ | 18 |
| ನಾರಾಯಣವರ್ಮ | ವಿ॥ ಬೆ.ನಾ. ವಿಜಯೀಂದಾಚಾರ್ಯ | 20 |
| ಆಯುರ್ಯಜ್ಞ | ಶ್ರೀ ಸುನಂದಕೀ | 23 |
| ಶ್ರೀಮಧ್ವಚರಿತ್ರೆ | ವಿ॥ ಅನಂತಕೃಷ್ಣಾಚಾರ್ಯ | 25 |
| ಹರಿಕಥಾಮೃತಸಾರ | ವಿ॥ ಕೆ. ಅಪ್ಪಣ್ಣಾಚಾರ್ಯ | 27 |
| ನಾಯಮಾತ್ಮ ಪ್ರವಚನೇನ ಲಭ್ಯಃ | ವಿ॥ ತಿರುಮಲ ಕುಲಕರ್ಣಿ | 31 |
| ಪುರಾಣ ಪ್ರಪಂಚ | ಸ್ಫೂರ್ತಿ | 39 |
| ನೆನಪಿನ ಅಂಗಳ | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**

ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**

ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ



**ಸಂಪಾದಕ ಮಂಡಳಿ:**

ವಿ॥ ಬಲರಾಮ ಭಟ್ಟ, ಉಡುಪಿ

ವಿ॥ ಮೋಹನಾಚಾರ್ಯ ಬೆಂಗಳೂರು

ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ

ಶ್ರೀ ಹರ್ಷ ಬೆಂಗಳೂರು



**ಅಕ್ಷರ ವಿನ್ಯಾಸ:** ಸ್ವಾತಿ ಭಾಗವತ್ ಉಡುಪಿ

**ವಾರ್ಷಿಕಚಂದಾ** : ರೂ. 90.00

**15 ವರ್ಷಕ್ಕೆ** : ರೂ. 1,250.00

**ಸದಸ್ಯರು** : ರೂ. 2,250.00

**ಪೋಷಕರು** : ರೂ. 3,000.00



**ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು**

# ಉದ್ಧವಗೀತೆ

–ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ



ಇದು ವೇದ–ಮಹಾಭಾರತ ಮುಂತಾದ ಇತಿಹಾಸ–ಪುರಾಣಗಳ ಸಾರ.

**ವಿದ್ವತ್ ಪ್ರಪಂಚ**

ಭಾಗ-೫



# ಶ್ರೀಮಧ್ವಮತದ ವೈಶಿಷ್ಟ್ಯಗಳು

-ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಆತನನ್ನು ನಂಬಿ ಕೆಟ್ಟವರಿಲ್ಲ.



ಇದು ಬರಿಯ ಮಾತಲ್ಲ, ಅನುಭಾವಿಗಳ ಅನುಭವದ ಮಾತು.

ಪ್ರವಚನ ಮಾಲಿಕೆ

ಭಾಗ–4

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ,

ಬರಹ: ಕೃಷ್ಣಾ

ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು



ಕೃಷ್ಣನ ಕಥೆಯನ್ನು ಕೇಳುತ್ತಿರಬೇಕು

(ಮುಂದುವರಿಯುತ್ತದೆ)





# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಪ್ರತಿದಿನ ಆತನನ್ನು ಪೂಜಿಸಬೇಕು



ಮುಖಪುಟಲೇಖನ

–ಬೊಮ್ಮರಬೆಟ್ಟು ಶ್ರೀನಿವಾಸ ಭಟ್ಟ

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

(....22....ನೇ ಪುಟದಲ್ಲಿ)

ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

# ಗುರುಕುಲದ ಅಗ್ನಿಪರೀಕ್ಷೆ

-ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ಧೌಮ್ಯರಿಗೆ ಮೂವರು ಶಿಷ್ಯರು: ಉಪಮನ್ಯು, ಆರುಣಿ, ಬೈದ.

ಒಮ್ಮೆ ಗುರುಗಳು ಆರುಣಿಗೆ ಹೇಳಿದರು. ನೀರು ಸೋರಿ ಹೋಗುತ್ತಿರುವ ಗದ್ದೆಯ ಬದುವನ್ನು ಬಂಧಿಸಿಡು. ಸರಿ ಎಂದು ಹೊರಟ ಆರುಣಿ ಎಷ್ಟು ಪ್ರಯತ್ನಿಸಿದರೂ ಗದ್ದೆಯ ಬದುವನ್ನು ಬಂಧಿಸಲಾಗಲಿಲ್ಲ. ದಿಕ್ಕು ತೋಚದ ಆರುಣಿ ಹೊಸ ಉಪಾಯ ಹೊಳೆದಂತೆ ತಾನೆ ಅಡ್ಡ ಮಲಗಿದ. ನೀರು ನಿಂತಿತು.

ಇತ್ತ ಶಿಷ್ಯನನ್ನು ಕಾಣದೆ ಸ್ವಲ್ಪ ಆತಂಕಗೊಂಡ ಧೌಮ್ಯರು ಶಿಷ್ಯರಲ್ಲಿ ವಿಚಾರಿಸಿದರು. ಗದ್ದೆಗೆ ತಾವೇ ಕಳುಹಿಸಿದರಲ್ಲ ಗುರುಗಳೇ! ಎಂದ ಶಿಷ್ಯರೊಡನೆ ಗುರುಗಳು ಗದ್ದೆಗೆ ಹೋದರು. ಮಗು ಆರುಣಿ ! ಬಾಪ್ಪ ಎಂದರು ಅಕ್ಕರೆಯಿಂದ. ತಡೆಯಲಾಗದ ನೀರನ್ನು ತಡೆಯಲು ಮಲಗಿದ್ದ ಆರುಣಿ ಆತುರದಿಂದ ಓಡಿ ಬಂದ ಗುರುಗಳ ಕರೆ ಕೇಳಿ ತನ್ನ ದೇಹವನ್ನೇ ಅಡ್ಡಗಟ್ಟಿ ನೀರು ನಿಲ್ಲಿಸಿ. ನನ್ನ ಮಾತು ನಡೆಸಿದ ನಿನಗೆ ಎಲ್ಲ ವೇದಶಾಸ್ತ್ರಗಳು ಧರ್ಮಶಾಸ್ತ್ರಗಳು ಹೊಳೆಯಲಿ. ಬದುವಿನ ಬದಿಯನ್ನು ಸೀಳಿ ಎದ್ದು ಬಂದ ನೀನು ಬದುಕಿನಲ್ಲಿ ಉದ್ದಾಲಕ ಎಂದೇ ಪ್ರಸಿದ್ಧನಾಗೆಂದರು.

ಮತ್ತೊಬ್ಬ ಶಿಷ್ಯ ಉಪಮನ್ಯು. ಅವನಿಗೆ ಕೊಟ್ಟ ಕೆಲಸ ಗೋಪಾಲನೆ. ಹಗಲೆಲ್ಲ ದನ ಕಾಯ್ದು ಸಂಜೆ ಮನೆಗೆ ಬಂದು ಗುರುಗಳ ಮುಂದೆ ನಿಂತು ನಮನ ಸಲ್ಲಿಸುವುದು ದಿನ ನಿತ್ಯದ ವಾಡಿಕೆ. ಪುಷ್ಟನಾದ ಉಪಮನ್ಯುವನ್ನು ಕಂಡು ಗುರುಗಳೊಮ್ಮೆ ಕುತೂಹಲದಿಂದ ಕೇಳಿದರು. ಮಗು ಉಪಮನ್ಯು! ಮೈ ಕೈ ತುಂಬಿಕೊಂಡು ಸುಂದರವಾಗಿ ಕಾಣುವಿ. ನಿನ್ನ ಆಹಾರವೇನು? ಗುರುಗಳೇ ! ನಾಕು ಮನೆ ಭಿಕ್ಷೆ ಬೇಡಿ ತಿನ್ನುತ್ತಿದ್ದೇನೆ. ಭಿಕ್ಷಾನ್ನವನ್ನು ನನಗರ್ಪಿಸದೇ ನಾಳೆಯಿಂದ ಉಪಯೋಗಿಸಬಾರದು ಎಂದರು ಗುರುಗಳು. ಮತ್ತೆ ಕೆಲವು ಸಮಯದ ಬಳಿಕ ಎಂದಿನಂತೆ ಸಂಜೆ ಬಂದು ಭಿಕ್ಷಾನ್ನವನ್ನರ್ಪಿಸಿ ತಲೆಬಾಗಿದ. ಆಗಲೂ ದಷ್ಟಪುಷ್ಟನೇ ಆಗಿ ಕಂಗೊಳಿಸುತ್ತಿದ್ದ. ಈಗೇನು

ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.



ಆಹಾರದ ವ್ಯವಸ್ಥೆ? ಎಂದು ಕೇಳಿದರು. ಮೊದಲ ಗುತ್ತಿನ ಭಿಕ್ಷಾನ್ನ ನಿಮಗೆ. ಎರಡನೇ ಸುತ್ತಿನ ಭಿಕ್ಷಾನ್ನ ನನಗೆ ಎಂದ.

ಛೇ! ಇದು ಅನ್ಯಾಯ. ಬೇರೆ ಭಿಕ್ಷಾವೃತ್ತಿಯ ಬ್ರಾಹ್ಮಣರಿಗೆ ಆಹಾರ ತಪ್ಪುವುದಲ್ಲವೆ? ನಾಳೆಯಿಂದ ಎರಡನೇ ಸುತ್ತಿನ ಭಿಕ್ಷಾಟನೆ ಸಲ್ಲದು! ಎಂದು ಎಚ್ಚರಿಸಿದರು. ಇನ್ನೊಮ್ಮೆ ಬಂದ ಪುಷ್ಟನಾದ ಉಪಮನ್ಯುವನ್ನು ನೋಡಿ ಕುತೂಹಲದಿಂದ ಆಹಾರದ ಬಗ್ಗೆ ವಿಚಾರಿಸಿದರು. ಗುರುಗಳೇ! ಹಾಲು ಕುಡಿದು ಬದುಕುತ್ತಿದ್ದೇನೆ. ತಪ್ಪು. ನನ್ನ ಅನುಮತಿಯಿಲ್ಲದೆ ಹಾಲು ಕುಡಿಯಕೂಡದು ಎಂದರು.

ಮತ್ತೆ ಉಪಮನ್ಯು ನಮಸ್ಕಾರ ಮಾಡಿದ. ಎರಡನೇ ಸುತ್ತಿನ ಭಿಕ್ಷಾನ್ನವಿಲ್ಲ. ಹಾಲೂ ಇಲ್ಲ. ಆದರೂ ದಷ್ಟಪುಷ್ಟನಾಗಿರುವೆಯಲ್ಲ? ಗುರುಗಳೇ ಹಾಲು ಕುಡಿವ ಕರುಗಳ ಬಾಯಿಯಿಂದ ಜಾರುವ ನೊರೆ ಕುಡಿದು ಬದುಕುತ್ತಿದ್ದೇನೆಂದ ಉಪಮನ್ಯು. ನೊರೆ ಕುಡಿಯಬಾರದು. ನಿನ್ನ ಮೇಲಿನ ಕರುಣೆಯಿಂದ ಕರುಗಳು ತಾವು ಹಾಲು ಕಡಿಮೆ ಕುಡಿದು ನಿನಗಾಗಿ ಹೆಚ್ಚು ನೊರೆಯನ್ನು ಚೆಲ್ಲುತ್ತವೆ. ಕರುಗಳ ಹೊಟ್ಟೆಗೆ ಹೊರೆಯಾಗುವುದೇ? ಎಂದರು ಧೌಮ್ಯರು.

ಗುರುಗಳು ಎಲ್ಲ ಬಗೆಯ ಆಹಾರವನ್ನು ನಿಷೇಧಿಸಿದ ಬಳಿಕ ಹಸಿದ ಉಪಮನ್ಯು ಏನೂ ತೋಚದೆ ಎಕ್ಕದ ಎಲೆಗಳನ್ನು ತಿಂದ ಪರಿಣಾಮ ಕುರುಡನಾದ. ಅಲೆದಲೆದು ಬಾವಿಗೆ ಬಿದ್ದು ಬಿಟ್ಟ. ಹಗಲ ಬೆಳಕು ಪಡುವಣದಿ ಮುಳುಗುವ ಸಮಯ ಬಂದರೂ ಶಿಷ್ಯ ಬಾರದಿದ್ದಾಗ ನನ್ನ ಮೇಲಿನ ಕೋಪದಿಂದ ಬಂದಿಲ್ಲವೆಂದು ಭಾವಿಸಿ ಶಿಷ್ಯರೊಡನೆ ಕಾಡಿಗೆ ಹೋಗಿ ವತ್ಸ! ಉಪಮನ್ಯು! ಎಂದು ಗಟ್ಟಿಯಾಗಿ ಕೂಗಿದರು. ಬಾವಿಯ ಆಳದಿಂದ ಅರಚಿದ ಗುರುಗಳೇ ಬಾವಿಯಲ್ಲಿ ಬಿದ್ದಿದ್ದೇನೆ! ಏಕೆ ಏನಾಯಿತು? ಎಂದು ಆತುರದಿಂದ ಕೇಳಿದರು ಧೌಮ್ಯರು. ಎಕ್ಕದ ಎಲೆಯನ್ನು ತಿಂದು ಕುರುಡಾದೆ. ಕಾಣದೆ ಬಾವಿಗೆ ಬಿದ್ದೆ ಎಂದ. ಅಶ್ವಿನೀ ದೇವತೆಗಳನ್ನು ಸ್ತೋತ್ರಮಾಡು. ಕಣ್ಣು ಕೊಡುತ್ತಾರೆಂದರು ಗುರುಗಳು.

ಅಶ್ವಿನೀ ದೇವತೆಗಳು ಸುಪ್ರಸನ್ನರಾಗಿ ಪ್ರಕಟರಾದರು. ಅಭಿಮಂತ್ರಿಸಿದ ಅಪೂಪವನ್ನಿತ್ತು ಇದನ್ನು ತಿನ್ನು. ಕಣ್ಣು ಬರುತ್ತದೆಯೆಂದರು. ಗುರುಗಳಿಗೆ ನಿವೇದಿಸದೆ ಅಪೂಪವನ್ನು ತಿನ್ನಲಾರೆ ಎಂದನು ಉಪಮನ್ಯು. ಮಗು! ಹಿಂದೊಮ್ಮೆ ನಿನ್ನ ಗುರುಗಳೂ ನಿನ್ನಂತೆ ನಮ್ಮನ್ನು ಸ್ತೋತ್ರಮಾಡಿದಾಗ ಅವರಿಗೂ ಅಪೂಪವನ್ನು ಕೊಟ್ಟೆವು.

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.

ಅವರು ಅವರ ಗುರುಗಳಿಗೆ ನಿವೇದನೆ ಮಾಡದೆ ತಿಂದರು. ನೀನೂ ಗುರುಗಳಿಗೆ ಕೊಡದೆ ತಿನ್ನು ಪರವಾಗಿಲ್ಲ ಎಂದರು. ಆದರೂ ಉಪಮನ್ಯು ಒಪ್ಪಲಿಲ್ಲ. ನಿನ್ನ ಗುರುಭಕ್ತಿಯನ್ನು ಮೆಚ್ಚಿದ್ದೇವೆ. ನಿನ್ನ ಹಲ್ಲುಗಳು ಸುವರ್ಣಮಯವಾಗುತ್ತವೆ. ಕಣ್ಣುಗಳು ಕಾಣುತ್ತವೆ. ಶ್ರೇಯಸ್ಸನ್ನು ಪಡೆಯುವಿ ಎಂದು ಹರಸಿದರು. ಕಣ್ಣು ಪಡೆದ ಉಪಮನ್ಯು ಗುರುಗಳ ಅಡಿಗಳಿಗೆರಗಿದನು. ಎಲ್ಲ ವೇದಗಳು ನಿನಗೆ ಸ್ಫುರಣವಾಗುತ್ತವೆ. ಎಲ್ಲ ಧರ್ಮಶಾಸ್ತ್ರಗಳೂ ನಿನಗೆ ಪ್ರತಿಭಾತವಾಗುತ್ತವೆ ಎಂದು ಮನಸಾರೆ ಹರಸಿದರು.

ಇನ್ನೊಬ್ಬ ಶಿಷ್ಯ ಬೈದ. ವಿದ್ಯಾಭ್ಯಾಸಕ್ಕಾಗಿ ಧೌಮ್ಯರಲ್ಲಿ ಶರಣಾದ. ಸ್ವಲ್ಪ ಕಾಲ ಮನೆಯಲ್ಲಿದ್ದು ಗುರುಶುಶ್ರೂಷೆ ಮಾಡು. ನಿನಗೆ ಶ್ರೇಯಸ್ಸಾಗುತ್ತದೆ ಎಂದರು ಧೌಮ್ಯರು. ಹಾಗೇ ಆಗಲೆಂದು ದೀರ್ಘಕಾಲ ಗುರುಶುಶ್ರೂಷೆಯಲ್ಲಿ ನಿರತನಾದನು. ಧೌಮ್ಯರು ನೊಗದಲ್ಲಿ ಎತ್ತಿನಂತೆ ಅವನನ್ನು ಕಟ್ಟಿ ಪರೀಕ್ಷಿಸಿದರು. ಶೀತ, ಉಷ್ಣ, ಹಸಿವೆ, ಬಾಯಾರಿಕೆ ಎಲ್ಲವನ್ನೂ ಸಹಿಸಿಕೊಂಡು ಎಂದಿಗೂ ಎದುರಾಡದೆ ವಿಧೇಯನಾಗಿ ಬಹುಕಾಲ ಕಳೆದ ಬಳಿಕ ಗುರುಗಳು ಸುಪ್ರಸನ್ನರಾದರು. ಗುರುಪ್ರಸಾದದಿಂದ ಸರ್ವಜ್ಞನಾದ ಬೈದ.

ಮುಂದೆ ಬೈದನಿಗೂ ಮೂವರು ಶಿಷ್ಯರಾದರು. ಗುರುಕುಲದಲ್ಲಿ ಗುರುಶುಶ್ರೂಷೆಯ ಕ್ಲೇಶವನ್ನು ಅನುಭವಿಸಿ ಮಾಗಿದ ಬೈದ ತನ್ನ ಶಿಷ್ಯರಿಗೆ ಯಾವುದೆ ಕೆಲಸವನ್ನು ಮಾಡಲು ಹೇಳಲಿಲ್ಲ. ಗುರುಶುಶ್ರೂಷೆಯ ನಿರ್ಬಂಧವನ್ನೂ ಹೇರಲಿಲ್ಲ. ಪ್ರೀತಿಯಿಂದ ಹಿತವಾಗಿ ನಡೆದುಕೊಂಡು ಶಿಷ್ಯರಿಗೆ ಉಪದೇಶ ಮಾಡಿದನು.

ಈ ಕಥೆಯನ್ನು ನೀವು ಅನೇಕ ಬಾರಿ ಕೇಳಿರಬಹುದು. ಪ್ರಾಚೀನ ಭಾರತದ ಗುರುಕುಲದಲ್ಲಿ ವೇದಾಂತದ ಪಾಠಕ್ಕೆ ಬಂದ ವಿದ್ಯಾರ್ಥಿಗಳನ್ನು ಇಷ್ಟು ಕಠಿಣವಾಗಿ ನಾನಾ ರೀತಿಯಿಂದ ಪರೀಕ್ಷಿಸಿ ಪಾಠ ಹೇಳುತ್ತಿದ್ದರು. ಅವರು ಮುಂದೆ ಅವರವರ ಯೋಗ್ಯತೆಗೆ ಅನುಗುಣವಾಗಿ ಸರ್ವಜ್ಞರೆನಿಸುತ್ತಿದ್ದರು. ಗುರುಪ್ರಸಾದದಿಂದ ವಿದ್ಯಾಸಿದ್ಧಿಯನ್ನು ಪಡೆಯುತ್ತಿದ್ದರು.

ವಿದ್ಯಾಭ್ಯಾಸ ಒಂದು ಸಣ್ಣ ಹವ್ಯಾಸವಾಗಿರದೆ ನಿರಂತರ ಆಸಕ್ತಿಯ ಕ್ರಿಯೆ ಆಗಿರಬೇಕು. ವಿದ್ಯೆಗೆ ತನ್ನನ್ನೇ ಅರ್ಪಿಸಿಕೊಳ್ಳಬೇಕು. ಜ್ಞಾನದ ದಾಹ ತುಂಬಿರಬೇಕು. ಅದಕ್ಕಾಗಿ ಯಾವ ಕಷ್ಟವನ್ನಾದರೂ ಅನುಭವಿಸುವ ಸಹನೆಯಿರಬೇಕು. ಸುಖ ದುಃಖಾದಿ ದ್ವಂದ್ವಗಳನ್ನು ಸಹಿಸಿಕೊಳ್ಳುವವನಾಗಬೇಕು. ವೇದಾಂತವಿದ್ಯೆಗೆ ಇಂತಹ ಕಠಿಣ ಪರಿಶ್ರಮ, ಸಮರ್ಪಣಭಾವ ಮೇಲಾಗಿ ಗುರುಪ್ರಸಾದವಿರಬೇಕು.

ಇಂದು ವಿದ್ಯಾರ್ಥಿ ಜೀವನವೆಂದರೆ ಮೋಜು ಮಜಾ ಮಾಡುವ ಸುವರ್ಣ

ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ



ದಿನಗಳು ಎಂಬ ಭಾವನೆಯಿದೆ. ತಾನು ಮಾಡುವ ವಿದ್ಯಾಭ್ಯಾಸದ ಬಗ್ಗೆ ಗೌರವವಿಲ್ಲ. ಶ್ರದ್ಧೆಯಿಲ್ಲ. ಗುರುಗಳಲ್ಲಿ ವಿಧೇಯತೆ ವಿನಯಗಳಿಲ್ಲ. ಅವರ ಬೆನ್ನ ಹಿಂದೆ ಏಕವಚನದಿಂದ ಅವರನ್ನು ಆಡಿಕೊಳ್ಳುವುದು, ಬೈಯುವುದು, ತರಗತಿಯಲ್ಲಿ ಅನುಚಿತವಾದ ವರ್ತನೆ ತೋರುವುದು. ಬೆಲೆ ಬಾಳುವ ಅಧಿಕ ವೇಗದ ವಾಹನಗಳು, ಜೋಬಿನ ತುಂಬ ನೋಟಿನ ಕಂತೆ, ಅಂಗೈಯಲ್ಲಿ ವಿಕೃತ ಕಾಮಕೇಲಿಗಳನ್ನು ದಾಖಲಿಸಿದ ಮೊಬೈಲ್‌ಗಳು, ತುಟಿಯಲ್ಲಿ ಧೂಮಪಾನ, ಮಧ್ಯಪಾನಗಳು ಇಂತಹ ದುರ್ವತನೆಯ ದುರಹಂಕಾರಗಳಿಗೆಂದೆಂದೂ ವಿದ್ಯೆ ಒಲಿಯುವುದಿಲ್ಲ.

ಗುರುಕುಲಗಳಲ್ಲಿ ವೇದಾಂತ ಓದಲು ಬರುವ ವಿದ್ಯಾರ್ಥಿಗಳೂ ಸದಾ ಮೋಜಿನ ಗುಂಗು, ಹಣಸಂಪಾದನೆಯ ಹಪಾಹಪಿತನ, ಮೊಬೈಲ್ ಹಿಡಿದು ಬೈಕ್‌ನಲ್ಲಿ ಸುತ್ತಿ ಶ್ರದ್ಧಾವಂತ ವಿದ್ಯಾರ್ಥಿಗಳನ್ನು ಹುಂಬರೆಂಬಂತೆ ಕಾಣುತ್ತ ಅವರನ್ನು ತಮ್ಮ ಖಯಾಲಿಗಳಿಂದ ಉದ್ರೇಕಗೊಳಿಸುವ ಹಮ್ಮಿನ ಓಡಾಟ ಒಡನಾಟಗಳಿಂದ ಗುರುಗಳಲ್ಲಿ ಗರುವದಿಂದ ನಡೆದುಕೊಳ್ಳುವರು.

ಗದ್ದೆಯ ನೀರನ್ನು ತಡೆಯಲು ಆದೇಶಿಸಿದರೆ ಆರುಣಿ ತಾನೆ ಅಡ್ಡ ಮಲಗಿ ನೀರು ನಿಲ್ಲಿಸಿ ಗುರುಗಳ ಮಾತು ನಡೆಸಿದ. ಎತ್ತೆತ್ತಲೋ ಪ್ರವಾಹದಂತೆ ಹರಿಯುವ ಮನಸ್ಸನ್ನು ಹುಚ್ಚು ನೀತಿ ಎಂಬ ಗದ್ದೆಯ ಚಾಕದಲ್ಲಿ ಬಂಧಿಸಿಡಬೇಕು. ಅದು ಶ್ರಮವೆನಿಸಿದರೂ ಅನಿವಾರ್ಯ. ಆಗಲೇ ಗುರುಪ್ರಸಾದ. ಗುರುಉಪದೇಶ. ವಿದ್ಯಾಸಿದ್ಧಿ.

ಎಲ್ಲ ಆಹಾರವನ್ನು ನಿಷೇಧಿಸಿ ನಿಷೇಧಿಸಿ ಉಪಮನ್ಯುವನ್ನು ಪರೀಕ್ಷಿಸಿದರು. ಮುಂದೆ ಅಶ್ವಿನೀದೇವತೆಗಳ ಅನುಗ್ರಹದೊರೆಯುವಂತೆ ಮಾಡಿ ಹೊರಗಣ್ಣು ಕೊಡಿಸಿದರು. ತಾವು ಅನುಗ್ರಹಿಸಿ ಒಳಗಣ್ಣು ತೆರೆಸಿದರು. ವಿದ್ಯಾರ್ಥಿಯಾದವನಿಗೆ ಆಹಾರ ನಿಯಂತ್ರಣವಿರಬೇಕು. ಜಿಹ್ವಾಚಾಪಲ್ಯವಿರಬಾರದು. ತಿಂಡಿಪೋತನಿಗೆ ವಿದ್ಯೆ ಹತ್ತುವುದಿಲ್ಲ. ಗುರುಪ್ರಸಾದವೂ ಇಲ್ಲ.

ಬೈದನಿಗೆ ನೊಗ ಹೊರಿಸಿ ಪರೀಕ್ಷಿಸಿದರು. ಶೀತೋಷ್ಣಸುಖದುಃಖಗಳನ್ನೂ ಸಹಿಸಿಕೊಂಡು ಸೇವೆ ಮಾಡಿದ. ಗುರುಗಳು ಅನುಗ್ರಹಿಸಿದರು. ವೇದಾಂತ ವಿದ್ಯೆ ಬೇಕಾದವನಿಗೆ ಸುಖದುಃಖಾದಿ ದ್ವಂದ್ವಗಳನ್ನು ಸಹಿಸುವ ಶಕ್ತಿಯಿರಬೇಕು.

ಒಟ್ಟಾರೆ ಮೂರು ಕಥೆಗಳಲ್ಲಿ ಗುರುಕುಲದ ಅಗ್ನಿಪರೀಕ್ಷೆಗಳಿಂದ ಗುರುಭಕ್ತಿ, ಸಂಯಮ, ಪರಿಶ್ರಮ, ಸಹನೆಗಳಿದ್ದವನಿಗೆ ಮಾತ್ರ ಗುರುಪ್ರಸಾದದಿಂದ ವೇದಾಂತವಿದ್ಯೆ ಲಾಭವಾಗುವುದು. ಕಲಿತ ಬ್ರಹ್ಮವಿದ್ಯೆ ಸಿದ್ಧಿಪ್ರದವಾಗುವುದು ಎಂಬುದನ್ನು ತಿಳಿಯಬೇಕು.

ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ಮಾಂಸರಕ್ತದ ಮಡುವಿನಲ್ಲಿ ನವ**
**ಮಾಸ ಜನನಿಯ ಜಠರದೊಳಗಿರು**
**ವಾ ಸಮಯದಲಿ ವೃತ್ತಿಯನು ಕಲ್ಪಿಸಿದ ಪ್ರಭುವಾರು ?**
**ನೀ ಸಲಹಿದವನಲ್ಲವೇಕರು**
**ಣಾಸಮುದ್ರನು ನೀನಿರಲು ಕಮ**
**ಲಾಸನನ ಹಂಗೇಕೆ ರಕ್ಷಿಸು ನಮ್ಮನನವರತ ॥೫೬॥**

ಮಾಂಸರಕ್ತಗಳ ಮಡುವೆನಿಸಿರುವ ತಾಯಿಯ ಒಡಲಲ್ಲಿ ಒಂಭತ್ತು ತಿಂಗಳಕಾಲ ನಾನಿದ್ದೆ. ಆ ಕಾಲದಲಿ ನನಗೆ ಜೀವನವೃತ್ತಿಯನ್ನು ಕಲ್ಪಿಸಿಕೊಟ್ಟ ಪ್ರಭು ನೀನಲ್ಲದೆ ಇನ್ನಾರು? ಆಗ ನನ್ನನ್ನು ಸಲಹಿದವ ನೀನೆ ಅಲ್ಲವೆ? ಕರುಣಾಸಮುದ್ರ ನೀನು ನನಗೆ ರಕ್ಷಕನಾಗಿರುವಾಗ ಬ್ರಹ್ಮನ ಹಂಗು ನನಗೇಕೆ? ನಮ್ಮನ್ನು ನೀನೇ ಸದಾ ಕಾಪಾಡುತ್ತಿರು.

## ಮಾಂಸರಕ್ತದ ಮಡುವಿನಲಿ

ನಾನು ಭೂಮಿಯಲ್ಲಿ ಜನಿಸಿದ ಬಳಿಕ ಹೊರಗಿನ ವಾತಾವರಣದಲ್ಲಿ ಉಸಿರಾಡುತ್ತೇನೆ. ಹೊರಗೆ ದೊರಕುವ ಅನ್ನಪಾನಗಳಿಂದ ನನ್ನನ್ನು ಕಾಪಾಡಿಕೊಳ್ಳುತ್ತೇನೆ. ಆದರೆ ಜನಿಸುವುದಕ್ಕೆ ಮೊದಲು ನಾನಿದ್ದುದು ತಾಯಿಯ ಒಡಲಲ್ಲಿ. ಮಾಂಸರಕ್ತಗಳ ಮಡುವಿನಲ್ಲಿ ನನಗೆ ಆಗ ಅತ್ತಿತ್ತ ಮಿಸುಕಾಡಲು ಕೂಡ ಸ್ವಾತಂತ್ರ್ಯವಿರಲಿಲ್ಲ.

## ನವಮಾಸ ಜನನಿಯ ಜಠರದೊಳಗೆ

ತಂದೆತಾಯಿಗಳ ಶುಕ್ರಶೋಣಿತ ಮೇಲನದಲ್ಲಿ ನಾನು ಹತ್ತುದಿನಗಳ ಕಾಲ ಇದ್ದೆ. ಬಳಿಕ ಒಂದು ಮಾಂಸದ ಮುದ್ದೆಯಾದೆ.. ಮುಂದೆ ನಾಲ್ಕು ತಿಂಗಳುಗಳಲ್ಲಿ ತಲೆ ಕೈಕಾಲು ಮುಂತಾದ ಅವಯವಗಳನ್ನು ಪಡೆದು ಏಳನೇ ತಿಂಗಳಿನಿಂದ ಗರ್ಭವಾಸದ ದುಃಖ ಅನುಭವಿಸಲು ತೊಡಗಿದೆ. ಒಂಭತ್ತು ತಿಂಗಳುಗಳವರೆಗೂ ಹಾಗೇ ಇದ್ದೆ.

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗ ಬೇಡ.



## ಆ ಸಮಯದಲಿ ವೃತ್ತಿಯನು ಕಲ್ಪಿಸಿದ ಪ್ರಭುವಾರು?

ಆ ಗರ್ಭವಾಸದ ಸಮಯದಲ್ಲಿ ನನಗೆ ವೃತ್ತಿ, ಅಂದರೆ ಜೀವನವೃತ್ತಿ, ಜೀವನೋಪಾಯ, ಅನ್ನನೀರು, ಉಸಿರಾಡಲು ಗಾಳಿ ಮೈಗೆ ಬೆಚ್ಚಗಿನ ಹೊದ್ದಿಕೆ ಎಲ್ಲವನ್ನೂ ನಾನೇನೂ ಸಂಪಾದಿಸಲಿಲ್ಲ. ನೀನೇ ನನಗೆ ತಾಯಿಉಂಡ ಅನ್ನ ನೀರು ಅವಳು ಉಸಿರಾಡಿದ ಗಾಳಿ ಅವಳ ಮೈಯ ಹಿತವಾದ ಬೆಚ್ಚಗಿನ ಹೊದ್ದಿಕೆ ಮುಂತಾದುವನ್ನು ನೀಡಿ ನೀನೇ ನನ್ನನ್ನು ಕಾಪಾಡಿದೆ. ನೀನಲ್ಲದೆ ಇನ್ನಾರು? ಇಂದ್ರಿಯಾಭಿಮಾನಿ ದೇವತೆಗಳು ಯಾರೂ ನನ್ನನ್ನು ಕಾಪಾಡಲಿಲ್ಲ. ಏಕೆಂದರೆ ನಾನು ಗರ್ಭಚೀಲದೊಳಗೆ ಬಂಧಿತನಾಗಿದ್ದಾಗ ನನ್ನ ಇಂದ್ರಿಯಗಳಿಗೆ ಕಣ್ಣು ಕಿವಿ ಮುಂತಾದವುಗಳಿಗೆ ಏನೂ ಕೆಲಸವೇ ಇರಲಿಲ್ಲ. ಗರ್ಭದಿಂದ ಹೊರಗೆ ಬಂದು ಕಣ್ಣುಬಿಟ್ಟಾಗಲೆ ಈ ದೇವತೆಗಳು ಇಂದ್ರಿಯಗಳಲ್ಲಿ ಇದ್ದು ನನ್ನನ್ನು ಕಾಪಾಡಲು ಮುಂದೆ ಬಂದರಷ್ಟೆ.

## ಕಮಲಾಸನನ ಹಂಗೇಕೆ?

ಜನಿಸಿದ ಬಳಿಕ ನಾನು ಜೀವನವೃತ್ತಿಯನ್ನು ಕೈಗೊಂಡಾಗ ಕೆಲವೊಮ್ಮೆ ಎಷ್ಟು ಪ್ರಯತ್ನಮಾಡಿದರೂ ಹಣಸಂಪಾದನೆಯಾಗಲಿಲ್ಲ. ಕೆಲವೊಮ್ಮೆ ಏನೂ ಯತ್ನಮಾಡದಿದ್ದಾಗಲೂ ಹಣಸಿಗುತ್ತಿತ್ತು. ಆಗ ನನಗೆ ಹೊಳೆಯಿತು, ಎಲ್ಲವೂ ಬ್ರಹ್ಮ ಹಣೆಯಲ್ಲಿ ಬರೆದಂತೆಯೇ ಆಗುತ್ತದೆ ಎಂದು. 'ನನ್ನ ಹಣೆಯಲ್ಲಿ ಸುಖವನ್ನೇ ಬರೆಯಪ್ಪಾ, ಬ್ರಹ್ಮ!' ಎಂದು ಬ್ರಹ್ಮನನ್ನು ಬೇಡಬೇಕೆನಿಸಿತು. ಅವನ ಹಂಗಿನಲ್ಲಿ ನಾನಿದ್ದೇನೆ ಎನಿಸಿತು. ಆದರೆ ಮರುಕ್ಷಣ ನಾನು ಆಲೋಚಿಸಿದೆ. ಗರ್ಭದೊಳಗೆ ನನ್ನನ್ನು ಕಾಪಾಡಿದ ಕರುಣಾಸಮುದ್ರನಾದ ಪ್ರಭು ನೀನು ಹೊರಗೆ ಕಾಪಾಡದಿರುವೆಯ? ಈ ಬಗ್ಗೆ ಅನುಮಾನ ಪಟ್ಟರೆ ಅದು ನಿನಗೆ ಅಪಚಾರವಾಗುತ್ತದೆ. ನನ್ನ ರಕ್ಷಣೆಗೆ ಬ್ರಹ್ಮನನ್ನು ನಾನೇಕೆ ಬೇಡಬೇಕು? ಅವನ ಹಂಗು ನನಗೇಕೆ? ನೀನು ನನ್ನನ್ನು ಕಾಪಾಡಲು ಸಂಕಲ್ಪಿಸಿದೆಯಾದರೆ ನಾನು ಬೇಡದಿದ್ದರೂ ಬ್ರಹ್ಮ ನನ್ನನ್ನು ಕಾಪಾಡುತ್ತಾನೆ, ಇಲ್ಲದಿದ್ದರೆ ಬೇಡಿದರೂ ಆತ ಕಾಪಾಡಲಾರ. ಆತ ಸ್ವತಂತ್ರನಲ್ಲ.

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

## ಆ ಸಮಯದಲಿ ವೃತ್ತಿಯನು ಕಲ್ಪಿಸಿದ ಪ್ರಭುವಾರು?

ಕನಕದಾಸರು ಯಮಾಂಶಸಂಭೂತರು. ಇಂದ್ರಾದಿದೇವತೆಗಳೆಲ್ಲರೂ ಜೀವನ್ಮುಕ್ತರು. ವ್ಯಾಪ್ತೋಪಾಸಕರು. ಪ್ರಾರಬ್ಧದಿಂದ ಗರ್ಭವಾಸ ಮಾಡುವ ಪ್ರಸಂಗ ಬಂದಾಗ ಅವರು ಗರ್ಭದಲ್ಲಿದ್ದೇ ಪರಮಾತ್ಮನನ್ನು ಪ್ರತ್ಯಕ್ಷ ಕಾಣುತ್ತಾರೆ. ಸ್ತುತಿಸುತ್ತಾರೆ. ಹರಿಕಥೆಗಳನ್ನು ಆಲಿಸುತ್ತಾರೆ. ಪ್ರಹ್ಲಾದ ತಾಯಿಯ ಗರ್ಭದಲ್ಲಿದ್ದಾಗಲೆ ನಾರದರ ಉಪದೇಶವನ್ನಾಲಿಸಿದ. ಪರಾಶರ ಮುನಿ ತಾಯಿಯ ಗರ್ಭದಲ್ಲಿ ವೇದೋಚ್ಚಾರಣ ಮಾಡಿದ್ದನ್ನು ವಸಿಷ್ಠರು ಕೇಳಿ ಆನಂದಿಸಿದರು. ಹೀಗೆ ಪಾರತ್ರಿಕ ಜೀವನಕ್ಕೆ ಉಪಾಯವಾದ ಶ್ರವಣಮನನಕೀರ್ತನಾದಿ ವೃತ್ತಿಯನ್ನು ತನಗೂ ಕೂಡ ಕಲ್ಪಿಸಿಕೊಟ್ಟವನು ಶ್ರೀಹರಿ ಎಂದು ದಾಸರು ಅವನಲ್ಲಿ ಹೇಳಿಕೊಳ್ಳುತ್ತಿರಬಹುದು.

## ಕಮಲಾಸನನ ಹಂಗೇನು?

ಹೀಗೆ ಗರ್ಭವಾಸ ಕಾಲದಿಂದಲೇ ತೊಡಗಿ ಪರಮಾತ್ಮನನ್ನು ಕಂಡು ಸ್ತುತಿಸುವ ಉತ್ತಮ ಭಕ್ತರಿಗೆ ಮುಂದೆ ಜನ್ಮವೇ ಇಲ್ಲ. ಸೃಷ್ಟಿಕರ್ತನಾದ ಬ್ರಹ್ಮ ಇವರಿಗೆ ಶರೀರ ಸೃಷ್ಟಿ ಮಾಡಿಕೊಡುವ ಪ್ರಸಂಗವೇ ಇಲ್ಲ ಎಂದ ಮೇಲೆ ಅವರಿಗೆ ಬ್ರಹ್ಮನ ಹಂಗೇಕೆ? **'ಸ ಏನಾನ್ ಬ್ರಹ್ಮಗಮಯತಿ'** ಎಂಬಂತೆ ಅವರನ್ನು ವಿಷ್ಣುಲೋಕಕ್ಕೆ ಒಯ್ಯುವವನೂ ಬ್ರಹ್ಮನೆ. ಆದರೂ ಹರಿಯಾಜ್ಞೆಯಂತೆ ಆತ ಮೋಕ್ಷ ನೀಡುತ್ತಾನೆ, ಸ್ವತಂತ್ರವಾಗಿ ಅಲ್ಲ. ಅದರಿಂದ ಹರಿಯೇ ನಮ್ಮನ್ನು ಸದಾ ಕಾಪಾಡಬೇಕು. ★



ಅವಲೋಕನ

# ನಾರಾಯಣಾಷ್ಟಾಕ್ಷರ ಜಪವಿಧಿ ನಿಯಮವಿಧಿಯೇ ಹೊರತು ಪರಿಸಂಖ್ಯಾವಿಧಿಯಲ್ಲ

-ಸಗ್ರಿ ರಾಘವೇಂದ್ರ ಉಪಾಧ್ಯಾಯ

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

**ಪ್ರಾತಃ ಸಂಧ್ಯಾಮುಪಾಸ್ಯೈವ ಮಾನಸೇಸುಸಮಾಹಿತಃ ।**

**ತತಃ ಅಷ್ಟಾಕ್ಷರಂ ಮಂತ್ರಂ ಗಾಯತ್ರ್ಯಾಸ್ತ್ರಿಗುಣಂ ಜಪೇತ್**

ಎಂಬ ಮತ್ತೊಂದು ತಂತ್ರಗ್ರಂಥದಲ್ಲಿ ಸಂಧ್ಯಯೊಆಪಾಸನೆಯ ಬಳಿಕ ನಾರಾಯಣಾಷ್ಟಕ್ಷರಮಂತ್ರವನ್ನು ಗಾಯತ್ರಿಗಿಂತ ಮೂರುಪಟ್ಟು ಜಪಿಸಬೇಕೆಂದು ನಿಯಮವಿಧಿಯಾಗಿ ಸ್ಪಷ್ಟ ವಿಧಿಸಿರುವುದರಿಂದ, ಇದಕ್ಕನುಗುಣವಾಗಿ ಆಚಾರ್ಯರ ಸಂದೇಶವೂ ನಿಯಮವಿಧಿಯಾಗಿಯೇ ಹೊರಟಿದೆ ಎಂದು ಒಪ್ಪಿಕೊಳ್ಳುವುದೇ ಉಚಿತ. ಶ್ರೀವೈಷ್ಣವರ ಆಚಾರಕಾಂಡದಲ್ಲಿ **'ಅಷ್ಟಾಕ್ಷರ ಗಾಯತ್ರೀಸಮಸಂಖ್ಯಾಕಂ ಜಪೇತ್'** ಎಂದು ಗಾಯತ್ರೀಮಂತ್ರ ಜಪದ ಸಂಖ್ಯೆಯಷ್ಟೇ ಸಂಖ್ಯೆಯಲ್ಲಿ ನಾರಾಯಣಾಷ್ಟಾಕ್ಷರ ಮಂತ್ರವನ್ನು ಜಪಿಸಬೇಕೆಂದು ಬಂದಿರುವ ಮಾತನ್ನು ಅಲ್ಲಗಳೆಯುವುದಕ್ಕಾಗಿಯೂ ಶ್ರೀಮಧ್ವರು ಈ ಸಂದೇಶದಲ್ಲಿ ಗಾಯತ್ರಿಗಿಂತ ಮೂರುಪಟ್ಟು ಸಂಖ್ಯೆಯಲ್ಲಿ ನಾರಾಯಣಾಷ್ಟಾಕ್ಷರ ಮಂತ್ರವನ್ನು ಜಪಿಸಲು ನಿಯಮವಿಧಿಯನ್ನು ಪ್ರಸ್ತುತಪಡಿಸಿರುವರೆಂದು ಭಾವಿಸಬಹುದಾಗಿದೆ. ಅಲ್ಲದೆ, ಗಾಯತ್ರೀಮಂತ್ರದಿಂದ ಸೂರ್ಯಮಂಡಲದಲ್ಲಿರುವ ಭಗವಂತನ ಉಪಾಸನೆ ನಡೆಸಿದವರು ಎಂದಿರುವಂತೆ ಸೂರ್ಯಮಂಡಲದಲ್ಲಿರುವವನೇ ಈ ಪಿಂಡಾಂಡದಲ್ಲೂ ಸುಷುಮ್ನಾನಾಡಿಯಲ್ಲಿ ನಾರಾಯಣರೂಪದಿಂದ ಇರುವನೆಂಬ ಅನುಸಂಧಾನಕ್ಕಾಗಿ ನಾರಾಯಣಾಷ್ಟಾಕ್ಷರ ಜಪವನ್ನೂ ವಿಧಿಸಿದ್ದು ಇಪ್ಪತ್ತಾಲ್ಕು ಅಕ್ಷರಗಳನ್ನೊಳಗೊಂಡ ಗಾಯತ್ರಿಯಿಂದ ಇಪ್ಪತ್ನಾಲ್ಕು ಭಗವದ್ರೂಪಗಳನ್ನು ಚಿಂತಿಸುವುದಾದರೆ, ನಾರಾಯಣಾಷ್ಟಾಕ್ಷರದ ಎಂಟು ಅಕ್ಷರಗಳಿಂದ ಪ್ರತಿಪಾದ್ಯಗಳಾದ ಎಂಟು ಭಗವದ್ರೂಪಗಳನ್ನು ಮೂರುಪಟ್ಟು ಚಿಂತಿಸಬೇಕು ಎಂದು ಅಕ್ಷರ ಸಂಖ್ಯೆಗೆ, ಅಕ್ಷರ ಪ್ರತಿಪಾದ್ಯ ಭಗವದ್ರೂಪಗಳ ಸಂಖ್ಯೆಗೆ ಅನುಗುಣವಾಗಿ ಮೂರುಪಟ್ಟು ನಾರಾಯಣಾಷ್ಟಾಕ್ಷರ ಮಂತ್ರದ ಜಪವನ್ನು ಶ್ರೀಮಧ್ವರು ವಿಧಿಸಿರುವಂತಹದ್ದು,

ಆದ್ದರಿಂದ ಇದು ನಿಯಮವಿಧಿಯೇ ಹೊರತು ಪರಿಸಂಖ್ಯಾವಿಧಿ ಅಲ್ಲ. ಆಚಾರ್ಯರು ನಾರಾಯಣಾಷ್ಟಾಕ್ಷರವನ್ನು ಜಪಿಸುವುದಾದರೆ ಗಾಯತ್ರೀಮಂತ್ರಜಪಕ್ಕಿಂತ ಮೂರು ಪಟ್ಟು ಸಂಖ್ಯೆಯಲ್ಲಷ್ಟೇ ಜಪಿಸಬೇಕೆಂದು ಈ ಮಾತಿನಲ್ಲಿ ತಿಳಿಸುತ್ತಿದ್ದಾರೆ ಎಂಬ ಸಂಕೋಚ ಉಚಿತವೆನಿಸದು.

## ಗಾಯತ್ರೀಜಪಕ್ಕೆ ಕಡಿತವೇ?

ಮೂರುಪಟ್ಟು ನಾರಾಯಣಾಷ್ಟಾಕ್ಷರ ಮಂತ್ರವನ್ನು ಜಪಿಸಬೇಕೆಂದು ಗಾಯತ್ರಿಗೆ ನಂಟು ಹಚ್ಚಿದ್ದರಿಂದ ಗಾಯತ್ರೀಜಪದಲ್ಲಿ ಕಡಿತ ಸಂಭವಿಸುವುದು ತಾನೆ? ಈ ಸಂದೇಹವನ್ನು ಎರಡು ಬಗೆಯಾಗಿ ಪರಿಹರಿಸಬಹುದಾಗಿದೆ. ನಾರಾಯಣಾಷ್ಟಾಕ್ಷರದ ನಂಟು ಹಚ್ಚಿದ್ದರಿಂದಾಗಿ ಸಾವಿರ ಸಂಖ್ಯೆಯಲ್ಲಿ ಗಾಯತ್ರಿಯನ್ನು ಜಪಿಸಲಾಗಿದೆ. ನೂರು ಸಂಖ್ಯೆಯಲ್ಲಷ್ಟೇ ಜಪಿಸಿದರೂ ಇದರಿಂದೇನೂ ಸಾಧನಾದೃಷ್ಟಿಯಿಂದ ನ್ಯೂನತೆ ಸಂಭವಿಸದು. ನೂರೇಗಾಯತ್ರೀ ಜಪಿಸಿದರೂ ಅದರ ಮೂರುಪಟ್ಟು ನಾರಾಯಣಾಷ್ಟಾಕ್ಷರವನ್ನು ಜಪಿಸಿದ್ದರಿಂದ ಗಾಯತ್ರಿಮಂತ್ರಜಪಕ್ಕೆ ಮೆರುಗು ಸಿದ್ಧಿಸಿದಂತಾಗಿ ಬರೇ ಸಾವಿರಗಾಯತ್ರಿ ಮಾಡುವುದಕ್ಕಿಂತಲೂ ಅಧಿಕ ಪುಣ್ಯವೇ ಸಂಭವಿಸಿದಂತಾಗುವುದು.

ಸಾವಿರ ಸಂಖ್ಯೆಯಲ್ಲಿ ಗಾಯತ್ರಿಯನ್ನು ಜಪಿಸಲಾಗುವುದಿಲ್ಲ ಎಂದೇನೂ ನೂರುಸಂಖ್ಯೆಗೇ ಇಳಿಯಬೇಕಾಗಿಲ್ಲ. **'ಸಹಸ್ರಪರಮಾಂ ದೇವೀಂ ಶತಮಧ್ಯಾಂ....'** ಎಂದು ಗರಿಷ್ಠಪ್ರಮಾಣ ಮಧ್ಯಮಪ್ರಮಾಣ ನೂರುಸಂಖ್ಯೆಯಗಾಯತ್ರೀಜಪ....ಎಂದು ತಿಳಿಸಿರುವ ಉದ್ದೇಶ ಸಾವಿರಸಂಖ್ಯೆಯಲ್ಲಿ ಆಗದಿದ್ದವರು ನೂರುಸಂಖ್ಯೆಯಲ್ಲಷ್ಟೇ ನಡೆಸಬೇಕು ಹೊರತು ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನಡೆಸಬಾರದು ಎಂದಲ್ಲ. ಹೊತ್ತಿಗೆ ಸಾವಿರ ಗಾಯತ್ರಿಯನ್ನು ನಡೆಸಿದಲ್ಲಿ, ಮೂರು ಹೊತ್ತಿನ ಮೂರುಸಾವಿರ ಆಗುವುದು. ಮೂರು ಸಾವಿರ ಗಾಯತ್ರಿಯಲ್ಲಿ ಒಟ್ಟು ಘಟಕ ಅಕ್ಷರಗಳು 72 ಸಾವಿರಗಳಾಗುವವು. (3000 X 24–72000) ನಮ್ಮ ಶರೀರದಲ್ಲಿರುವ 72ಸಾವಿರ ನಾಡಿಗಳಲ್ಲಿ ಇರುವ 72 ಸಾವಿರ ಭಗವದ್ರೂಪಗಳ, ಹಾಗೂ ನಮ್ಮ ಗರಿಷ್ಠ ಪ್ರಮಾಣದ ನೂರುವರ್ಷಗಳ ಆಯುಸ್ಸಿನ ಘಟಕಗಳಾದ ರಾತ್ರಿ ಹಗಲುಗಳ 72ಸಾವಿರ ಅವಧಿಗಳನ್ನು (360 X100 = 36000 X2 = 72000) ನಿಯಮಿಸುತ್ತ ಇರುವ 72 ಸಾವಿರ ಭಗವದ್ರೂಪಗಳ ಸ್ತುತಿ ಸಾವಿರ

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**



ಗಾಯತ್ರಿಯ ಜಪದಿಂದ ನಡೆದಂತಾಗುವುದು. ನಮ್ಮ ಸಮಗ್ರ ಆಯುಷ್ಯವನ್ನು ಸಮಗ್ರದೇಹವನ್ನು ನಿಯಂತ್ರಿಸುವ ಭಗವದ್ರೂಪಗಳ ಸ್ತುತಿ ಆದಂತಾಗುವ ಪ್ರಯುಕ್ತ ಸಾವಿರಸಂಖ್ಯೆಯ ಗಾಯತ್ರೀಜಪ ಪರಮ ಅಂದರೆ ಶ್ರೇಷ್ಠ ಎನಿಸಿದೆ.

ಸಾವಿರದ ಬದಲು ನೂರುಗಾಯತ್ರಿಮಂತ್ರಜಪ ಆಯಿತೆಂದರೆ ಮೂರು ಹೊತ್ತಿಗೆ 300 ಆಗುವುದು. ಮುನ್ನೂರು ಗಾಯತ್ರಿಯಲ್ಲಿ ಒಟ್ಟು ಘಟಕ ಅಕ್ಷರಗಳು 72000. ಆದುದರಿಂದ ಒಟ್ಟು 300 ಗಾಯತ್ರೀ ಜಪದಿಂದಾಗಿ ನಮ್ಮ ನಾಡಿಗಳನ್ನೂ ಆಯುಷ್ಯವನ್ನೂ ನಿಯಂತ್ರಿಸುವ 7200 ಭಗವದ್ರೂಪಗಳನ್ನೂ ಹತ್ತನೇ ಒಂದು ಅಂಶದಲ್ಲಿ ಶ್ರುತಿಸಿದಂತಾಗುವುದು. ಹೀಗೆಯೇ ಹೊತ್ತಿಗೆ ಹತ್ತೇ ಗಾಯತ್ರಿ ಜಪಿಸಿ ಒಟ್ಟು 30 ಸಂಖ್ಯೆಯಲ್ಲಿ ಗಾಯತ್ರಿಮಂತ್ರವನ್ನು ಜಪಿಸುವುದರಿಂದ ನಮ್ಮ ನಾಡಿಗಳಲ್ಲಿರುವ ಹಾಗೂ ಆಯುಷ್ಯವನ್ನು ನಿಯಂತ್ರಿಸುವ 72 ಸಾವಿರ ಭಗವದ್ರೂಪಗಳನ್ನು (30 x 24= 720) ನೂರನೆಯ ಒಂದಂಶದಲ್ಲಿ ಸ್ತುತಿಸಿದಂತಾಗುವುದು. ಹೀಗೆ ಗಾಯತ್ರೀಮಂತ್ರ ಜಪಕ್ಕೂ ನಮ್ಮ ದೇಹದ ನಾಡಿಯಲ್ಲಿದ್ದು ಕೂಡ ನಮ್ಮ ಆಯುಷ್ಯದ ಹಗಲಿರುಳುಗಳಲ್ಲಿದ್ದುಕೊಂಡು ನಮ್ಮ ಬದುಕನ್ನು ರೂಪಿಸುವ ಭಗವದ್ರೂಪಗಳಿಗೂ ಸಂಬಂಧದ ಅನುಸಂಧಾನ ಬರಬೇಕೆಂದಷ್ಟೇ ಸಾವಿರ, ನೂರು, ಹತ್ತು ಎಂದು ಸಂಖ್ಯಾ ವಿಶೇಷದ ನಿರ್ದೇಶ ನಡೆದಿದೆ. ಸಂಖ್ಯಾ ವಿಶೇಷದ ಸಂಬಂಧ ಇಲ್ಲದೆಯೂ ಗಾಯತ್ರೀಮಂತ್ರಕ್ಕೂ ನಮ್ಮ ಬದುಕನ್ನು ರೂಪಿಸುವ ಭಗವದ್ರೂಪಗಳಿಗೂ ಇರುವ ನಂಟಿನ ಅನುಸಂಧಾನ ಬಂದೋ ಬರುವುದೆಂದಾದರೆ ಸಂಖ್ಯೆಗೆ ಭಾರೀ ಒತ್ತು ಕೊಡುವ ಅವಶ್ಯಕತೆ ಕಾಣಿಸದು. **'ಆರಂಭಮಾತ್ರಮಿಚ್ಛಾ ವಾ ವಿಷ್ಣುಧರ್ಮೇ ನ ನಿಷ್ಫಲಾ.....'** ಎಂದು ವಿಷ್ಣುಧರ್ಮದ, ಭಾಗವತಧರ್ಮದ ಹಿರಿಮೆಯನ್ನು ಸಾರುತ್ತಿರುವ ಪ್ರಮಾಣದ ಪ್ರಕಾರ ವಿಷ್ಣುಧರ್ಮವನ್ನಾಚರಿಸಬೇಕೆಂಬ ಬಯಕೆಯೂ ಫಲಕಾರಿಯಾಗುವುದಾದರೆ ಅಂತಹ ವಿಷ್ಣುಧರ್ಮದ ವ್ಯಾಪ್ತಿಯಲ್ಲೇ ಬರುವ ಗಾಯತ್ರೀ ಮಂತ್ರದ ಹತ್ತಕ್ಕಿಂತ ನೂರರವರೆಗಿನ ಹಾಗೂ ನೂರ ಒಂದಕ್ಕಿಂತ ಒಂಬೈನ್ನೂರತೊಂಭತ್ತೊಂಭತ್ತರವರೆಗಿನ ಸಂಖ್ಯೆಯಲ್ಲಿ ನಡೆಸಲಾಗುವ ಜಪ ಯಾಕೆ ತಾನೆ ಫಲಪ್ರದವೆನಿಸಲಾರದು.

ಗಾಯತ್ರೀ ಮಂತ್ರದ ಜಪದ ಸಂಖ್ಯೆಯ ಮೂರುಪಟ್ಟು ಸಂಖ್ಯೆಯಲ್ಲೇ ಜಪಿಸಬೇಕು. ಹಾಗಾದರಷ್ಟೇ ಗಾಯತ್ರಿ ಮಂತ್ರದ ಜಪವೂ ಫಲಪ್ರದವಾಗುವುದು ಎಂಬುದಾಗಿ ನಿಯಮವಿಧಿಯ ರೂಪದಲ್ಲೇ ಹೊರಟಿದೆ ಎಂದು ನಿರ್ಧ[illegible]

**[illegible]ಗಳ ಅಭಿಪ್ರಾಯಕ್ಕೆ ವಿರುದ್ಧವಾದ ದುಷ್ಟವಾದಗಳನ್ನು ಖಂಡಿಸಿರಿ.**

[illegible]ಕ್ಷೇತ್ರದ ಹನುಮಜ್ಜಯಂತಿಯ ಸಂದರ್ಭದಲ್ಲಿ ಪಲಿಮಾರಿನಲ್ಲಿ ಆಯೋಜಿಸ[illegible] ಪುರೋಹಿತಗೋಷ್ಠಿಯಲ್ಲಿ ನಾರಾಯಣಾಷ್ಟಕರ ಜಪದ ಬಗ್ಗೆ ನಡೆದ ಚರ್ಚೆಯ ಹಿನ್ನಲುಯಲ್ಲಿ ಈ ನಿರ್ಧಾರನ್ನು ಪ್ರಸ್ತುತಪಡಿಸಲಾಗಿದೆ. ಈ ಬಗ್ಗೆ ಜಿಜ್ಞಾಸುಗಳಿಗೆ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

ಹೃದ್ಯೋಸ್ತು ಮೇ ಹಯಗ್ರೀವೋ ದುರ್ಗೇ ಭವದನುಗ್ರಹಾತ್ ॥

ಅರ್ದಯಾರ್ದಯ ನಃ ಶತ್ರೂನ್ ದುರ್ಗೇ ಸ್ವರ್ಗಾಪವರ್ಗದೇ ।
ತ್ವದ್ದಯಾ ಕ್ವ ಮಾಮಾಂಬೈಷಾ ದುರ್ದಶಾ ಕ್ವಾರಿಮರ್ದಿನಿ ॥
ಸ್ವರ್ಗಾಪವರ್ಗಗಳ ಭದ್ರಮಾಡುವ ದುರ್ಗೇ
ಸದೆಬಡಿದು ಸೀಳಮ್ಮ ನಮ್ಮನದ ಶತ್ರುಗಳ ।
ಬ್ರಹ್ಮಾದಿಸುರಗಣಕೆ ಸ್ಥಿತಿ ಕೊಡುವ ಕರುಣಾಳು
ನಮ್ಮ ದುರಿತಗಳೆಲ್ಲಿ? ಮಹಿಷಮರ್ದಿನಿಯೇ! ॥

ಹೀಗೆ ತತ್ವಜ್ಞಾನವನ್ನು ಕೊಟ್ಟು ಸಜ್ಜನರ ಸ್ಥಿತಿಗತಿಗಳನ್ನು ನೋಡುವ ಜೀವಕ್ಕೆ ತಾಯಿ ಎನ್ನುತ್ತಾರೆ. ಕೇವಲ ಹೊಟ್ಟೆಗೆ ಹಾಕಿದಮಾತ್ರಕ್ಕೆ ತಾಯ್ತನ ಪೂರ್ಣವಾಗದು. ಉತ್ತಮ ಜ್ಞಾನ ನೀಡಿದಾಗ ಮಾತ್ರ ತಾಯಿ ಎನಿಸುವಳು. ಹೀಗೆ ಎರಡನ್ನು ಸರಿಯಾಗಿ ತುಂಬಿದಾಗಲೇ ಜಗತ್ತಿನ ಸ್ಥಿತಿ ಗತಿ. ಇದನ್ನು ತಿಳಿಯದವ ಮಂದಮತಿ. ಇಂತಹ ಮಂದಮತಿಗಳಿಗೆ ಸ್ಥಿತಿಯಲ್ಲಿ ಅಮಂದಾನಂದವನ್ನು ಕೊಡಲೋಸುಗವೇ ಆನಂದಮೂರುತಿ ಧರೆಗೆ ಕಳುಹಿಸಿದ ಮೂರುತಿ ಶ್ರೀಮದಾನಂದತೀರ್ಥಯತಿ. ಇವರಿಗೂ ದುರ್ಗೆಯೇ ಗತಿ. ಚಕ್ರತೀರ್ಥವನ್ನು ನಿರ್ಮಿಸಿದ ಯತಿ ಅವತರಿಸಿದ ಸ್ಥಳ ಲೋಕಮಾತೆ– ಯಾದ ದುರ್ಗೆ ಅವತರಿಸಿದ ಪಾಜಕ ಕ್ಷೇತ್ರ. ಶ್ರೀಮದಾಚಾರ್ಯರು ಸಜ್ಜನರ ರಕ್ಷಣೆಗೆ ಕಟಿಬದ್ಧರಾದುದೇ ದುರ್ಗೆಯ ಸನ್ನಿಧಾನದಲ್ಲಿ. ಹೀಗೆ ಪರಮಾತ್ಮನು ಚಕ್ರಧರಿಸುವ ಮೂಲಕ ಜಗತ್ತಿನ ತನ್ನ ರಕ್ಷಕತ್ವಗುಣವನ್ನು ಪ್ರಕಟಪಡಿಸಿದ್ದಾನೆ.

ಲೋಕ ರಕ್ಷಕನಾದ ಅಂಬರೀಷ ಚಕ್ರವರ್ತಿಗೂ ಚಕ್ರವೇ ರಕ್ಷಣೆ ನೀಡಿತ್ತು. ದುರ್ವಾಸರ ಬೆನ್ನಟ್ಟಿ ಭಗವದ್ಭಕ್ತರ ರಕ್ಷಣೆಯ ಆದರವನ್ನು ಚೆನ್ನಾಗಿ ತೋರಿದ ಭಾಗವತದ ಕಥೆ



ಕೇಳಿದವರೆಲ್ಲರಿಗೂ ತಿಳಿದಿದೆ. ಇದರಂತೆ ಪೌಂಡ್ರಕವಾಸುದೇವನನ್ನು ಚಕ್ರದಿಂದ ಕತ್ತರಿಸಿ ಜಗತ್ತಿನ **'ಅಹಂ ಬ್ರಹ್ಮಾಸ್ಮಿ'** ಎಂಬ ಕತ್ತಲೆಯನ್ನು ಪರಿಹರಿಸಿದ ಬಳಿಕ ತಂದೆಯ ಮರಣದಿಂದ ಖಿನ್ನನಾದ ಪೌಂಡ್ರಕಪುತ್ರ ಸುಲಕ್ಷಣನು ಮಹದೇವನನ್ನು ಆರಾಧಿಸಿ ಕೃತ್ಯೆ ಒಂದನ್ನು ಪಡೆದು ದ್ವಾರಕೆಯ ಅಸ್ತಿತ್ವವನ್ನೇ ನಾಶಮಾಡಹೊರಟಾಗಲೂ ದ್ವಾರಕೆಗೆ ಬಂದ ಆಪತ್ತನ್ನು ಕ್ಷಣಾರ್ಧದಲ್ಲಿ ಪರಿಹರಿಸಿ ಮೆರೆದ ಸುದರ್ಶನದ ರಕ್ಷಕತ್ವಗುಣದ ಹಿರಿಮೆಗರಿಮೆಗಳಿಗೆ ಎಣೆ ಉಂಟೇ??

ಇಂದಿಗೂ ಲೋಕದ ಸಜ್ಜನ ಮಂದಿಯ ರಕ್ಷಣೆ ಚಕ್ರದಿಂದಲೇ ಅಲ್ಲವೇ! **'ಅತಪ್ತತನೂರ್ನತದಾಮೋ ಅಶ್ನುತೇ'** ಎಂಬ ಮಂತ್ರವು "ಪಾಕವಾಗದ ಮಡಿಕೆಯಲ್ಲಿ ಹಾಕಿದನೀರು ಸೋರಿಹೋಗುವಂತೆ ತಪ್ತಚಕ್ರದ ಲಾಂಛನವಿಲ್ಲದ ಗಾತ್ರದಲ್ಲಿ ಆಚರಿಸಿದ ಕರ್ಮಗಳು ವ್ಯರ್ಥ" ಎನ್ನುತ್ತದೆ. ಚಕ್ರಧರಿಸಿ ಆಚರಿಸಿದ ಕರ್ಮಗಳೇ ಸಾರ್ಥಕ. ಅಂತೂ ಜಗತ್ತಿನ ಸ್ಥಿತಿಯನ್ನು ಜ್ಞಾನದ ಮೂಲಕ ನೆರವೇರಿಸುವ ಚಕ್ರಾಯುಧಧಾರಿಯಾದ ಚಕ್ರಪಾಣಿಗೆ ನಮೋ ಎಂಬೆ.

## ಸಂಹಾರ ಗುಣ ಚರ್ಮದಿಂದ

ಯುದ್ಧಕ್ಕೆ ಹೊರಟ ರಾಜಭಟರು ಬಲಗೈಲಿ ಖಡ್ಗವನ್ನು ಎಡಗೈಲಿ ಗುರಾಣಿಯನ್ನು ಹಿಡಿದು ಯುದ್ಧಕ್ಕೆ ಹೊರಡುತ್ತಾರೆ. ಕೇವಲ ಖಡ್ಗ ಹಿಡಿದು ಹೋಗುವವನಿಗೆ ಶತ್ರುಗಳೆಸೆದ ಬಾಣಗಳಿಂದ ಘಾಸಿ ಆಗುವ ಅಪಾಯವಿದೆ. ಅದಕ್ಕೆ ಉಪಾಯ ಈ(ಗುರಾಣಿ) ಚರ್ಮ. ಶತ್ರುಗಳು ಎಸೆದ ಬಾಣಗಳನ್ನು ತಡೆವ ಶಕ್ತಿ ಈ ಚರ್ಮಕ್ಕಿದೆ. ಇದರ ಪೂರ್ಣ ಬೆಂಬಲವನ್ನು ಪಡೆದ ಖಡ್ಗ, ಶತ್ರುಗಳನ್ನು ಸದೆಬಡಿಯಲು ಮುಂದಾಗುತ್ತದೆ. ಅಂತೂ ಖಡ್ಗದಿಂದ ನಡೆಯುವ ಸಂಹಾರಕ್ರಿಯೆಗೆ ಪೂರ್ಣಬೆಂಬಲ ಈ ಚರ್ಮದಿಂದ.

ಇದರಂತೆ ಜಗತ್ತಿನ ಸಂಹಾರ ಕ್ರಿಯೆ ರುದ್ರನಿಂದ ಎಂಬುದು ಪ್ರಸಿದ್ಧ. ಸಂಹಾರ ಕ್ರಿಯೆ ಸುಲಭ ಎಂದು ರುದ್ರದೇವರಿಗೆ ಈ ಕ್ರಿಯೆ ನೀಡಲಾಗಿದೆ. "ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ" ಎಂಬ ಲೋಕಗಾದೆಯು ಇದನ್ನೇ ಹೇಳುತ್ತದೆ. ಆದರೆ ಶ್ರೀಹರಿಯು ಪಾಲನೆಯನ್ನು ನಿಮಿಷದಲ್ಲಿ ಮಾಡಿಯಾನು, ರುದ್ರನಿಗೆ ಸ್ವತಂತ್ರವಾಗಿ ಸಂಹಾರವನ್ನು ವರುಷದಲ್ಲಿಯೂ ಮಾಡಲಾರ. ಇಂತಹ ರುದ್ರನಿಗೆ ಒಳಗೆ ನಿಂತು ಶಕ್ತಿ ತುಂಬುವವನು ಪರಮಾತ್ಮನೇ.

ಇಲ್ಲದಿದ್ದಲ್ಲಿ **"ರುದ್ರಸ್ಯೈವ ಧನುರಾತ್ನಿಃ ಶಿರ ಉತ್ಪಿಪೇಷ "** ಎಂಬ ಯಜುರ್ಮಂತ್ರವು "ರುದ್ರನ ಪಿನಾಕ ಧನುಸ್ಸು ರುದ್ರನ ತಲೆಯನ್ನೇ ಹಾರಿಸಿತು" ಎಂದು ಹೀಗೆ ಹೇಳಿತು. ತನ್ನ

ಧನುಸ್ಸಿನಿಂದಲೇ ರಕ್ಷಣೆ ಪಡೆಯಲಾಗದವ ಜಗತ್ತಿನ ಭಕ್ಷಕನಾಗುವ ಬಗೆ ಎಂತು? ಆದ್ದರಿಂದ ರುದ್ರನೊಳಗೆ ನಿಂತು ಹರಿಯೇ ಜಗತ್ತನ್ನು ಸಂಹರಿಸುವನೆಂಬುದು ದಿಟ. ಖಡ್ಗದಿಂದ ಸಂಹಾರ ನಡೆದಂತೆ ತೋರಿದರೂ ಚರ್ಮದ ಸಹಾಯ ಕ್ಷಣ ಕ್ಷಣಕ್ಕೂ ಬೇಕು. ಇದರಂತೆ ಹರಿಯ ಅನುಗ್ರಹದಿಂದಲೇ ಸಂಹಾರ ಕ್ರಿಯೆ. ಇದಕ್ಕೆ ಸಾಕ್ಷಿ ಚರ್ಮ (ಗುರಾಣಿ).

ಇಂದಿಗೂ ನಮಗೆ ಯಾರಾದರು ಹೊಡೆಯಲು ಬಂದರೆ; ಕೆಳಗೆ ಬೀಳುವ ಅಪಾಯ ಬಂದರೆ, ಮೊದಲು ರಕ್ಷಣೆಗೆ ಮುಂದಾಗಿನಿಲ್ಲುವುದು ನಮ್ಮ ಎಡಗೈ. ನಂತರ ಹೊಡೆಯಲು ಮುಂದಾಗುವುದು ಬಲಗೈ. ಶ್ರೀಹರಿಯು ಸಂಹಾರಕ್ಕೆ ಸಹಕಾರಿಯಾಗಿ ಉಪಯೋಗಿಸುವ ಕೈ, ಎಡಗೈ. ಒಂದು ಅರ್ಥದಲ್ಲಿ ಜಗತ್ತೆಲ್ಲವನ್ನು ಶ್ರೀಹರಿಯು ಸಂಹರಿಸಲು ಮುಂದಾದಲ್ಲಿ ದುರ್ಗೆಗಾಶ್ರ0ುವಾದ ಅವನ ಎಡಗೈ ಸಾಕು. ವಿಶೇಷವನ್ನಾಶ್ರಯಿಸಿ ಎಡಗೈ ಎನ್ನಲಾಗಿದೆ.

## ನಿಯಮನ ಖಡ್ಗದಿಂದ

ದನ ಮೇಯಿಸುವ ಗೊಲ್ಲ ಕೋಲು ಹಿಡಿದರೆ, ಕುದುರೆ ಸವಾರ ಚಾವುಟಿ ಧರಿಸುತ್ತಾನೆ. ಯಮದೇವ ದಂಡ ಹಿಡಿದು ದುರ್ಜನರನ್ನು ನಿಯಮಿಸಿದರೆ, ಶ್ರೀಹರಿಯು ಖಡ್ಗದಿಂದ ಜಗತ್ತನ್ನು ನಿಯಮಿಸುತ್ತಿದ್ದಾನೆ. ಶ್ರೀಹರಿ ಖಡ್ಗಧರಿಸಿನಿಂತಿದ್ದರೆ ನರಸಿಂಹ ಖಡ್ಗದ ಅಂತರ್ಯಾಮಿಯಾಗಿದ್ದಾನೆ.

ಅಲ್ಲ! ಖಡ್ಗ ಸಂಹರಿಸುವ ಆಯುಧ, ಇದರಿಂದ ನಿಯಮನ ಹೇಗೆ? ಎಂಬುದೊಂದು ಸಹಜ ಜಿಜ್ಞಾಸೆ. ಆದರೆ ಇಲ್ಲಿ ಶ್ರೀಹರಿಯು ಮಾಂಸ ಕಡಿಯುವ ಕಟುಕನಂತೆ ಖಡ್ಗವನ್ನು ಧರಿಸಿಲ್ಲ. ಭಕ್ತರನ್ನು ರಕ್ಷಿಸಬೇಕೆಂಬ ಕಾರುಣ್ಯದಿಂದ ಖಡ್ಗವನ್ನು ಧರಿಸಿದ್ದಾನೆ. ಖಡ್ಗಾಂತರ್ಯಾಮಿಯಾಗಿ ಸ್ವತಃ ತಾನೇ ಇದ್ದಾನೆ. ಕೆಲವೊಮ್ಮೆ ನಾವು ಎಸೆದ ಖಡ್ಗ ನಮಗೆ ಮುಳುವಾದೀತು. ನಾವು ಕಡಿಯಲು ಮುಂದಾದಾಗ ನಮ್ಮ ಬೆರಳೇ ತುಂಡಾದೀತು. ಆದರೆ ಹರಿಯ ಗುರಿ ತಪ್ಪಿ ಬೀಳದು. ಆದ್ದರಿಂದಲೇ ನಾರಾಯಣವರ್ಮದ ಕೊನೆಯಲ್ಲಿಯೂ "ಭಗವಂತನ ನಾಮ, ರೂಪ, ಅಸ್ತ್ರಗಳನ್ನು ಸ್ತುತಿಸುವುದ ರಿಂದ ದುರಿತಗಳು ಕೂಡಲೆ ನಾಶಹೊಂದುತ್ತವೆ ಎಂದು "**ಭಗವನ್ನಾಮ ರೂಪಾಸ್ತ್ರಕೀರ್ತನಾತ್ ಪ್ರಯಾಂತಿ ಸಂಕ್ಷಯಂ ಸದ್ಯೋ‌ಃ 0ುೇsನ್ಯೇ ಶ್ರೇಯಃ ಪ್ರತೀಪಕಾಃ**"ಎಂದು ತಿಳಿಸಲಾಗಿದೆ. ತುಕ್ಕು ಹಿಡಿಯುವ ಕೇವಲ ಜಡವಾದ ಅಸ್ತ್ರಗಳ ಚಿಂತನೆಯಿಂದ ದುರಿತಗಳು ನಾಶವಾಗುವುದಾದರೂ ಹೇಗೆ? ಅದಕ್ಕಾಗಿ ಅಂತರ್ಯಾಮಿ ಚಿಂತನೆಯನ್ನು ನಡೆಸಲೇ ಬೇಕು. ಅಷ್ಟೇ ಅಲ್ಲದೆ ಕೇವಲ ಜಡವಾದ ಖಡ್ಗಕ್ಕೆ ನಿಯಾಮಕತ್ವವಾದರೂ ಹೇಗೆ? **(ಮುಂದುವರಿಯುವುದು)**

**ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ.**



ಭಾಗ-3

# ಆಯುರ್ಯಜ್ಞ

**ಸಂಕಲನ: ಸುನಂದಕೀ**

**(....38....ನೇ ಪುಟದಲ್ಲಿ)**

**ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ.**

ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ.





–ಅನಂತಕೃಷ್ಣಾಚಾರ್ಯ,ಉಡುಪಿ

(....38....ನೇ ಪುಟದಲ್ಲಿ)

ರಾಮಾಯಣ–ಮಹಾಭಾರತ–ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ.

# ಸದ್ಗತಿದಾಯಕವಿದು

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ಆನೆಗಳು ರಕ್ಷಣೆಗಳಿದ್ದಂತೆ. ಅಷ್ಟೆಲ್ಲಾ ರಕ್ಷಣೆಯ ಹೆಬ್ಬಯಕೆ ಹಿಂದೆ ಹಿರಿದಾದ ಭಯ ಮನೆಮಾಡಿರುತ್ತದೆ. ಹೋದೆಡೆಯಲ್ಲೆಲ್ಲಾ ಪ್ರಚಾರ– ಪ್ರಾಮುಖ್ಯತೆಗಾಗಿ ಬಯಸುವುದಿಲ್ಲವೇ? ಇಂದು ಆನೆ ಕಪ್ಪಾಗಿ ಉಳಿದಿಲ್ಲ. ರಾಜಕಾರಣಿಗಳ ಬಳಿ ಬಿಳಿ ಆನೆಗಳಾಗಿ ಅಧಿಕಾರಿಗಳಾಗಿ ಬಿದ್ದಿದ್ದಾರೆ. ಇವರನ್ನು ಸಾಕಲು ಏನೆಲ್ಲಾ ಬೊಕ್ಕಸ ಬರಿದು ಮಾಡಿದರೂ ಈ ಆನೆಗಳಿಗೆ ತೃಪ್ತಿಯಿಲ್ಲ.

ಇನ್ನು ಕುದುರೆಗಳು–ಅಂದರೆ ವಾಹನಗಳು. ಗಗನದಲ್ಲಿ ಹಾರಾಡುವ ವಿಮಾನದಿಂದ ಹಿಡಿದು ರಸ್ತೆಯಲ್ಲಿ ರಾರಾಜಿಸುವ ವಾಹನಗಳನ್ನು ಬಯಸದವರಾರು. ಇಂದು ಇಡೀ ಸರ್ಕಾರದಲ್ಲಿ ಹಗಲಿಡೀ ಹೆಣಗಾಡುವ ಡಿಪಾರ್ಟ್‌ಮೆಂಟ್ ಎಂದರೆ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್. ಎಲ್ಲರಿಗೂ ವಾಹನಬೇಕು. ವೇಗಬೇಕು ಆದರೆ ರಸ್ತೆಯಲ್ಲಿ ಜಾಗ ಹೇಗೆ ಸಿಗಬೇಕು?

ಇಷ್ಟಾದರೂ ಹಿಂದೆ ಇಡೀ ಮನೆಗೆ ಒಂದು ಸೈಕಲ್ ಇತ್ತು. ಈಗ ಮನೆಯಲ್ಲಿನ ಪ್ರತಿಯೊಬ್ಬರಿಗೂ ಒಂದೊಂದು ವಾಹನ. ರಸ್ತೆ ಅಗಲ ಆಗುತ್ತಿದೆ. ಈ ವಾಹನದ ವ್ಯಾಮೋಹ ಮೀರಿದ ಸಂಚಾರಿ ಯಾರಿದ್ದಾರೆ? ಇಂದು ಕಾರ್ಯಭಾರ ಕಡಿಮೆ. ಕಾರುಭಾರು ಜಾಸ್ತಿಯಾಗಿ ನಿಂತಿದೆ. ಧನವಿಲ್ಲದ ದಿನ ಕಲ್ಪನೆಗೆ ಬರಬಹುದು. ಆದರೆ ವಾಹನವಿಲ್ಲದ ಅಧಿಕಾರ ಪ್ರತಿಷ್ಠೆ ತಿರಸ್ಕಾರಕ್ಕೆ ಸರಿ.

ಪಾಶ್ಚಾತ್ಯ ದೇಶಗಳಲ್ಲಿ ಸಂಬಳದ ಭಾಗವಾಗಿ ವಾಹನ ನೀಡುತ್ತಾರೆ. ಹಿಂದೆ ಅದು ಕುದುರೆಯಾಗಿತ್ತು. ಈಗ ವ್ಯಾಪಾರ ಕುದುರಿಸುವ ಕುದುರೆಯ ಚೇಷ್ಟೆ ಆಗಿದೆ.

ಇನ್ನು ಹಣ, ಹಿರಣ್ಯ ಇದರ ಬಗ್ಗೆ ಹೇಳಬೇಕಾದ್ದೇ ಇಲ್ಲ. ಇಂದು ತಮ್ಮ ಬದುಕಿನ ಬಗ್ಗೆ ತಿಳಿದಿರಲಿ ಎಂದು ಹಣದಲ್ಲಿ ಚಿನ್ನವನ್ನು ಖರೀದಿಸುವರು. ತಮ್ಮ ಹಣ ಕಾಣಲೆಂದು ಅವರ ಬಯಕೆ. ಇನ್ನು ಕೆಲವರು ತಮ್ಮಲ್ಲಿರುವ ಹಣ ಕಾಣದಿರಲೆಂದು ಚಿನ್ನದ ಮೇಲೆ ಹಣ ಹೂಡುತ್ತಾರೆ. ಈ ಚಿನ್ನದ ವ್ಯಾಮೋಹವೇ ಹಣದ ಪ್ರತೀಕ. ಇಂದು ಈ ಹಿರಣ್ಯಕ್ಕೆ

ಧನಕ್ಕೆ ತಲೆ ಓಡಿಸದವರೂ ತಲೆ ಬಾಗದವರು ಯಾರೂ ಇಲ್ಲ ಎನ್ನಬಹುದು. ಈ ಹಣಕ್ಕಾಗಿ ಬಾಯಿಬಿಡುವವರು ಕೆಲವರು. ಬಾಯಿ ಮುಚ್ಚುವವರು ಕೆಲವರು. ಈ ಹಿರಣ್ಯಕ್ಕೆ ಶರಣಾಗದವರೇ ಇಲ್ಲ. ನರಕಕ್ಕೆ ನುಗ್ಗಿದರೂ ಪರವಾಗಿಲ್ಲ ಎಂದು ಹೇಳುವ ನಾಚಿಕೆಗೆಟ್ಟವರೂ ಇದ್ದಾರೆ. ಯಮ ಒಡ್ಡಿರುವ ಈ ವ್ಯಾಮೋಹಕ್ಕೆ ಬಲಿಯಾಗದಿರುವವರು ಯಾರೂ ಇಲ್ಲ.

ಇನ್ನು ಭೂಮಿಯ ಒಡೆತನ. ಇದನ್ನು ಬಯಸಲು ಏನೆಲ್ಲಾ ಕರಾಮತ್ತು ನಡೆಸುತ್ತಾರೆ. ಹಿಂದೆ ಭೂಮಿಯಲ್ಲಿ ಚಿನ್ನ ಎಂಬ ಕಾಲ ಇತ್ತು. ಇಂದು ಭೂಮಿಯೇ ಚಿನ್ನ ಎಂಬ ಹಂತಕ್ಕೆ ಬಂದಿದೆ. ಬೆಳೆ ಬೆಳಯುವ ಭೂಮಿ-ಬಂಗಲೆ ಬರುವ ಬಂಜರು ಭೂಮಿ. ಬಂಡೆಗಲ್ಲಿರುವ ಬೆಟ್ಟದಲ್ಲಿ ಕಟ್ಟುವ ಕಟ್ಟಡ. ಹೀಗೆ ಜಾಗ ಪಡೆಯುವುದು ಸಾಹಸದ ಸಂಕೇತವಾಗಿದೆ. ಇಂದು ವಿದ್ಯಾಭ್ಯಾಸ-ಅಕ್ಷರಾಭ್ಯಾಸ ಅಷ್ಟರಷ್ಟೇ. ಗೃಹಪ್ರವೇಶ ಇದರ ಗತ್ತೇ ಬೇರೆ. ಇದಕ್ಕಾಗಿ ಇಡೀ ಸಂಬಳ ಮೀಸಲಿಡುವವರು ಕೆಲವರು. ಸಾಯುವ ಪರ್ಯಂತ ಸಿಮೆಂಟು ಕಟ್ಟಡಗಳಿಗಾಗಿ, ಕಬ್ಬಿಣಗಳಿಗಾಗಿ, ಸುಣ್ಣ ಬಣ್ಣಗಳಿಗಾಗಿ ಕಚ್ಚಾಡಿ ಪ್ರಾಣತೆತ್ತು ತಾನು ಕಟ್ಟಿದ ಮನೆಯಲ್ಲಿ ವಾಸಿಸದೆ ಬಾಡಿಗೆಯ ಅತಿ ಆಸೆಯಿಂದ ಯಮನ ಬಾಯಿಗೆ ಹೋಗುವವರ ಸಂಖ್ಯೆ ಸಾಮಾನ್ಯ ಏನೂ ಅಲ್ಲ. ಇಂದು ಬ್ಯಾಂಕ್ ಬೆಳೆಯುತ್ತಿರುವುದೇ ಮನೆ-ಜಾಗಗಳಿಗೆ ಕೊಡುವ ಸಾಲದಿಂದಾಗಿ. ಇದಕ್ಕಾಗಿ ಬೆವರು ಸುರಿಸುವವರ, ಬೇಸ್ತು ಬೀಳಿಸುವವರ ಸಂಖ್ಯೆ ಅಪಾರ. ಇದಕ್ಕಾಗಿಯೇ ನರಕಕ್ಕೆ ಒಂದು ಬಾಗಿಲು ಸಾಲದೆಂದು ಯಮ ಮೂರು ಬಾಗಿಲು ಇಟ್ಟಿದ್ದಾನೆ. ಕಾಮದ ಭರಾಟೆ-ಭೂಮಿಯ ಗಲಾಟೆ ಮಹತ್ತಾದುದು.

**ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।**
**ಕಾಮಃ ಕ್ರೋಧಸ್ತಥಾಲೋಭಃ ತಸ್ಮಾತ್ ಏತತ್ ತ್ರಯಂ ತ್ಯಜೇತ್॥**

ಈ ದೇಹದ ಒಳಗೆ ಜೀವನಿದ್ದಾನೆ. ಆತ್ಮೋದ್ಧಾರ ಎಂಬುದನ್ನೇ ಮರೆತು ಮಣ್ಣಿಗಾಗಿ ಮಣ್ಣಾಗುವ ಬಂಗಲೆಗಾಗಿ ಬೂದಿಯಾಗುವ ಈ ವ್ಯಾಮೋಹ ಹಣಕ್ಕಿಂತ ಮಿಗಿಲು. ಹಣ ಕಣ್ಣಿಗೆ ಕಾಣದೆ ಪ್ರತಿಷ್ಠೆ ಏರಿಸಿದರೆ ಕಟ್ಟಡ ಕಣ್ಣೆದುರಿಗೆ ಇದ್ದು ಅಂತಸ್ತು ಏರಿಸುತ್ತದೆ. ಇದನ್ನು ಗೆದ್ದವರುಂಟೆ?

**(ಮುಂದುವರಿಯುವುದು)**

**ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,**



# ಯಾತ ಯಾಮತೆ ಎಂದರೇನು?

ಭಗವದ್ಗೀತೆಯ ಹದಿನೇಳನೆಯ ಅಧ್ಯಾಯದಲ್ಲಿ ಸಾತ್ವಿಕ-ರಾಜಸ-ತಾಮಸ ಆಹಾರಗಳ ಬಗ್ಗೆ ಹೇಳುವಾಗ ಈ ಶ್ಲೋಕ ಬಂದಿದೆ.

**ಯಾತಯಾಮಂ ಗತರಸಂ ಪೂತಿ ಪರ್ಯುಷಿತಂ ಚ ಯತ್ ।**
**ಉಚ್ಛಿಷ್ಟಮಪಿ ಚಾಮೇಧ್ಯಂ ತಾಮಸಪ್ರಿಯಂ ॥**

ಇದರರ್ಥ-ಅಡುಗೆ ಮಾಡಿ ಒಂದು ಯಾಮ ಕಳೆದ, ರಸವನ್ನು ಕಳೆದುಕೊಂಡು ದುರ್ಗಂಧಯುಕ್ತವಾದ, ಹಳಸಿದ, ತಿಂದು ಉಳಿದ ಮತ್ತು ಅಪವಿತ್ರವಾದ ಆಹಾರವು ತಾಮಸ ಎಂದು.

ಇಲ್ಲಿ ಯಾತಯಾಮ ಎನ್ನುವುದರ ಅಭಿಪ್ರಾಯ ವಿಶದವಾಗಬೇಕಿದೆ. ಯಾಮ ಶಬ್ದಕ್ಕೆ ಮೂರುಗಂಟೆಗಳು ಅಥವಾ ನಾಲ್ಕು ಗಂಟೆಗಳು ಎಂಬ ಅರ್ಥ ಇದೆ. ಕೋಷಗಳಲ್ಲಿ ಯಾಮ ಶಬ್ದಕ್ಕೆ ಮೂರುಗಂಟೆಗಳು ಎಂಬ ಅರ್ಥ ಇದೆ.

ರಾತ್ರಿಯ ಪರ್ಯಾಯಗಳನ್ನು ಹೇಳುವಾಗ **'ತ್ರಿಯಾಮ ಕ್ಷಣದಾ ಕ್ಷಪಾ'** ಎಂಬ ಅಮರಕೋಶದಲ್ಲಿ ರಾತ್ರಿಯಲ್ಲಿ ಮೂರು ಯಾಮಗಳಿರುತ್ತವೆ ಎಂದಿದೆ. ಸಾಮಾನ್ಯವಾಗಿ ರಾತ್ರಿ ಕಾಲ ಹನ್ನೆರಡು ಗಂಟೆ. ಅದರ ಮೂರನೆ ಒಂದು ಭಾಗ ಎಂದರೆ ನಾಲ್ಕು ಗಂಟೆ. ಅಂತೂ ಮೂರು ಅಥವಾ ನಾಲ್ಕು ಗಂಟೆ ಕಳೆದ ಆಹಾರ ತಾಮಸ ಎನಿಸುತ್ತದೆ.

ಅಕ್ಕಿ-ಬೇಳೆಯಂತಹ ಪದಾರ್ಥಗಳು, ಬೆಳೆದು ಕಟಾವು ಮಾಡಿದ ಎಷ್ಟೋ ತಿಂಗಳ ನಂತರವೂ ಉಪಯೋಗಿಸುವಂತಹವು. ಅವೆಲ್ಲ ತಾಮಸವಾದರೆ ಜೀವನವೇ ದುರ್ಭರವಾದೀತು. ಆದ್ದರಿಂದ, ಅಡುಗೆಮಾಡಿ ಒಂದು ಯಾಮ ಕಳೆದ ಆಹಾರ ಎಂಬ ಅರ್ಥವನ್ನು ಮಾಡಲಾಗಿದೆ. ಸರಿ.

ಆದರೆ ಎಷ್ಟೋ ಸಂದರ್ಭಗಳಲ್ಲಿ ಬೆಳಿಗ್ಗೆಯಿಂದ ಅಡುಗೆ ಮಾಡಲು ಆರಂಭಿಸಿ ಮಧ್ಯಾಹ್ನದ ವೇಳೆಗೆ ನೈವೇದ್ಯಾದಿಗಳು ನಡೆದು ಸಂತರ್ಪಣೆ ನಡೆಯುತ್ತದೆ. ಕೆಲವು ಸಂದರ್ಭಗಳಲ್ಲಿ ಕಾರಣಾಂತರಗಳಿಂದ, ಕೆಲವರಿಗೆ ಕಾಯುವ ಪ್ರಸಂಗ ಬಂದು, ಅಡುಗೆ

**ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.**

ಆಗಿ ಐದಾರು ಗಂಟೆಗಳ ನಂತರವೂ ಭೋಜನ ಮಾಡುವ ಸಂದರ್ಭಗಳಿವೆ. ಇವೆಲ್ಲ ತಾಮಸವಾದವೆ?

ಇಂಥ ಸಂದರ್ಭದಲ್ಲಿ ಶಿಷ್ಟರೂ ವರ್ಜನ ಮಾಡದಿರುವುದರಿಂದ ಇವು ತಾಮಸವಲ್ಲ ಎನ್ನುವುದು ಉಚಿತ. ಹಾಗಾದರೆ ಈ ವಾಕ್ಯದ ಆಶಯ ಏನು? ಮಾಡಿದ ಅಡುಗೆ ತನ್ನ ಬಿಸಿ ಕಳೆದುಕೊಂಡು ಯಾಮ ಕಳೆದರೆ ತಾಮಸ ಎಂಬ ಅಭಿಪ್ರಾಯವಿರಬಹುದೆ? ಅಂಥ ಸಂದರ್ಭದಲ್ಲಿ ಅಡುಗೆಯನ್ನು ಬಿಸಿ ಆರದಂತೆ ವ್ಯವಸ್ಥೆ ಮಾಡಬೇಕು ಎಂಬ ಆಯವೆ? ಇಂದು ಅನೇಕ ಮಂದಿ ಮಧ್ಯಾಹ್ನದ ಅಡುಗೆಯನ್ನು, ಅನ್ನವಲ್ಲದಿದದರೂ ಸಾರು-ಹುಳಿ-ಪಲ್ಯಗಳಂಥ ಪದಾರ್ಥಗಳನ್ನು ರಾತ್ರಿ ಸ್ವೀಕರಿಸುವ ಪರಿಪಾಠ ಇದೆ. ಇದು ಅಪ್ರಶಸ್ತವಾದೀತೆ?

ಇದರ ಜೊತೆಗೆ, ಯಾತಯಾಮತೆಯ ಉಲ್ಲೇಖವಿರುವ ಮತ್ತೊಂದು ಸ್ಥಳವನ್ನು ಗಮನಿಸುವುದು ಉಚಿತ. ಉಪಾಕರ್ಮದ ಸಂಕಲ್ಪದಲ್ಲಿ

**'ಅಧೀತಾನಾಂ ಛಂದಸಾಂ ಯಾತಯಾಮತಾ ನಿರಸನದ್ವಾರಾ ಅಪ್ಯಾಯನಾರ್ಥಂ'** '

ಕಲಿತ ವೇದಗಳ ಯಾತಯಾಮತೆಯನ್ನು ಕಳೆದು ಪುಷ್ಟಿಗೊಳಿಸಲು' ಎಂಬ ಮಾತು ಬರುತ್ತದೆ. ವೇದಗಳ ಯಾತಯಾಮತೆ ಎಂದರೇನು? ಶಾಸ್ತ್ರಗಳಲ್ಲಿ ಒಟ್ಟು ಎಷ್ಟು ವಿಧದ ಯಾತಯಾಮತೆ ಇದೆ?

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.**



# ಜ್ಞಾತಜ್ಞಾಪಕ ಏಕೆ ಪ್ರಮಾಣವಲ್ಲ?

ದ್ವೈತಸಿದ್ಧಾಂತದಲ್ಲಿ ಪ್ರತ್ಯಕ್ಷ-ಅನುಮಾನ-ಆಗಮ ಎಂಬ ಮೂರು ಪ್ರಮಾಣಗಳನ್ನು ಒಪ್ಪಲಾಗಿದೆ. **'ಯಥಾವಸ್ಥಿತಜ್ಞೇಯ ವಿಷಯೀಕಾರಿತ್ವಂ'** ಇದ್ದದ್ದನ್ನು ಇದ್ದ ಹಾಗೇ ಗ್ರಹಿಸುವಂಥದ್ದು ಪ್ರಮಾಣ ಎಂಬುದು ಪ್ರಮಾಣಗಳ ಸಾಮಾನ್ಯ ಲಕ್ಷಣ ಎಂದು ಪ್ರಮಾಣಪದ್ಧತ್ಯಾದಿಗಳಲ್ಲಿ ಹೇಳಲಾಗಿದೆ. ಪ್ರಮಾಣಗಳ ವಿಶೇಷಲಕ್ಷಣಗಳನ್ನು ಹೇಳುವಾಗ **'ನಿರ್ದೋಷಃ ಶಬ್ದಃ ಆಗಮಃ'** ದೋಷವಿಲ್ಲದ ಶಬ್ದ ಆಗಮಪ್ರಮಾಣ ಎಂದು ಮೂರನೆ ಪ್ರಮಾಣದ ಲಕ್ಷಣವನ್ನು ಹೇಳಲಾಗಿದೆ. ಶಬ್ದಗಳಲ್ಲಿ ದೋಷಗಳಿದ್ದರೆ ಅವುಗಳಿಂದ ಸರಿಯಾದ ಜ್ಞಾನ ಬರುವುದಿಲ್ಲ. ದೋಷಗಳಿಲ್ಲದಿದ್ದರೆ ಸರಿಯಾದ ಜ್ಞಾನ ಬರುತ್ತದೆ ಎಂದು ಅದರ ಆಶಯ.

ಶಬ್ದಗಳ ದೋಷಗಳಲ್ಲಿ ಈ ಕೆಳಗಿನವುಗಳನ್ನು ಪರಿಗಣಿಸಿದ್ದಾರೆ.

★ **ಜ್ಞಾತಜ್ಞಾಪಕತ್ವಂ**-ತಿಳಿದದ್ದನ್ನೇ ತಿಳಿಸುವುದು ಉದಾ. ಬೆಂಕಿ ಬಿಸಿ

★ **ಅಪ್ರಯೋಜಕತ್ವಂ** – ಪ್ರಯೋಜನಕ್ಕೆ ಬಾರದ್ದು. (ಇದಕ್ಕೆ ಸರ್ವಜನ ಸಂಬಂಧಿ ಉದಾಹರಣೆ ಕಷ್ಟ. ಆದರೂ ಮೋಕ್ಷಸಾಧನೆ ಎಂಬ ಪ್ರಯೋಜನವನ್ನು ಇಟ್ಟುಕೊಂಡು ವಿಚಾರಮಾಡಿದರೆ, ಹೆಚ್ಚಿನ ಲೌಕಿಕ ವಿಷಯಗಳು ಇದಕ್ಕೆ ಉದಾಹರಣೆ ಆಗುತ್ತವೆ.)

★ **ಅನಭಿಮತಪ್ರಯೋಜಕತ್ವಂ**- ಕೇಳುವವನಿಗೆ ಬೇಡದ ವಿಷಯವನ್ನು ತಿಳಿಸುವುದು. ಉದಾಃ ವಿರಕ್ತನಿಗೆ ವ್ಯಾಪಾರವಹಿವಾಟಿನ ಉಪದೇಶ.

★ **ಅಶಕ್ತನಾಥನಪ್ರತಿವಾದನಂ**- ಅಸಾಧ್ಯವಾದ್ದನ್ನು ಮಾಡಲು ಹೇಳುವುದು. ಉದಾಃ ಅಶಕ್ತಿಯಿಂದ ಮಲಗಿದವನಿಗೆ ವ್ಯಾಯಾಮ ಮಾಡಲು ಹೇಳುವುದು.

ಹೀಗೆ ಇನ್ನೂ ಅನೇಕ ದೋಷಗಳನ್ನು ಹೇಳಿದ್ದಾರೆ. ಆದರೆ, ಈ ಎಲ್ಲ ಸಂದರ್ಭಗಳಲ್ಲಿ ವಾಕ್ಯಗಳು ಇಲ್ಲದ್ದನ್ನೇನೂ ಹೇಳುತ್ತಿಲ್ಲ. ಅಂದರೆ ಅಯಥಾರ್ಥಗಳೇನೂ ಅಲ್ಲ!! ಅಂದರೆ, ಇವುಗಳಲ್ಲಿ ಪ್ರಮಾಣ ಸಾಮಾನ್ಯ ಲಕ್ಷಣ ಬರುತ್ತದೆ. ಆದರೆ ವಿಶೇಷ ಲಕ್ಷಣ ಬರುವುದಿಲ್ಲ!!!

ಇದು **'ನಿರ್ವಿಶೇಷಂ ನ ಸಾಮಾನ್ಯಂ'** ಎಂಬ ನಿಯಮಕ್ಕೆ ವಿರುದ್ಧ.

**ಭಾರತೀಯ ಸಂಸ್ಕೃತಿ-ವಿದ್ಯೆಗಳನ್ನು ಕಲಿಯಲು ತೊಡಗಿರಿ.**

ಸಾಮಾನ್ಯಭಾಷೆಯಲ್ಲಿ ಹೇಳುವುದಾದರೆ, ಒಬ್ಬ ವ್ಯಕ್ತಿಯನ್ನು ತೋರಿಸಿ ಇವನು ಮನುಷ್ಯ, ಆದರೆ ಗಂಡು-ಹೆಣ್ಣು-ನಪುಂಸಕ ಈ ಮೂರು ಅಲ್ಲ ಎಂದು ಹೇಳುವುದು ಹೇಗೆ ತಪ್ಪು ಅಂದರಂತೆ ಜ್ಞಾತಜ್ಞಾಪಕಾದಿವಾಕ್ಯಗಳ ಪರಿಸ್ಥಿತಿ ಆಗುವುದಲ್ಲವೆ?

ಶಾಸ್ತ್ರದ ಪರಿಭಾಷೆಯನ್ನು ಬಿಟ್ಟು ವಿಚಾರ ಮಾಡಿದರೂ, ಒಬ್ಬ ನಮಗೆ ತಿಳಿದದ್ದನ್ನೇ ಹೇಳುತ್ತಿದ್ದರೆ ನಮ್ಮ ಪ್ರತಿಕ್ರಿಯೆ ಏನಿರುತ್ತದೆ?

1) ನನಗಿದು ತಿಳಿದಿದೆ. ನೀನು ಹೇಳಬೇಡ ಎನ್ನುತ್ತೇವೆ.

2) ಅದರ ಕಡೆ ಗಮನ ಕೊಡುವುದಿಲ್ಲ.

3) ಅಲ್ಲಿಂದ ಎದ್ದು ಹೋಗುತ್ತೇವೆ. ಹೊರತು ನೀನು ಹೇಳುತ್ತಿರುವುದು ತಪ್ಪು (ಅಯಥಾರ್ಥ) ಎನ್ನುವುದಿಲ್ಲ. ಅಂದರೆ, ಅಂತ ವಾಕ್ಯಗಳ ಪ್ರಾಮಾಣ್ಯಕ್ಕೇನೂ ಚ್ಯುತಿ ಇಲ್ಲ. ಅಂಥವು ಗ್ರಾಹ್ಯ ಅಲ್ಲ, ಅಷ್ಟೆ.

ಪ್ರಮಾಣವೆನಿಸಿದ ಕಣ್ಣು-ಕಿವಿ ಮೊದಲಾದ ಇಂದ್ರಿಯಗಳಿಂದಲೂ ಅಷ್ಟೆ. ಬೇಕಾದ ವಿಷಯಗಳನ್ನು ತಿಳಿದಂತೆ ಬೇಡದ ಸಂಗತಿಗಳನ್ನು ಅರಿಯುತ್ತೇವೆ. ಹಾಗೆಂದು ಅವುಗಳಲ್ಲಿ ತಿಳಿದದ್ದನ್ನು ತಿಳಿಸುವ (ಜ್ಞಾತಜ್ಞಾಪಕ) ಇಂದ್ರಿಯವನ್ನು ಅಪ್ರಮಾಣ ಎಂದು ದ್ವೈತಸಿದ್ಧಾಂತದಲ್ಲಿ ಪರಿಗಣಿಸಿಲ್ಲ. (ಅನಧಿಗತಾರ್ಥಗಂತೃ ಪ್ರಮಾಣಂ ಎಂದು ಸಾಮಾನ್ಯಲಕ್ಷಣ ಹೇಳುವ ಮೀಮಾಂಸಕರು ಅಪ್ರಮಾಣ ಎನ್ನುತ್ತಾರೆ. ಅದು ಬೇರೆ ದ್ವೈತಸಿದ್ಧಾಂತದಲ್ಲಿ ಪರಿಗಣಿಸಿಲ್ಲ. )

ಒಟ್ಟಿನಲ್ಲಿ ಎರಡು ಪ್ರಶ್ನೆಗಳು-

1) ಜ್ಞಾತಜ್ಞಾಪಕಾದಿ ವಾಕ್ಯಗಳಲ್ಲಿ ಪ್ರಮಾಣಸಾಮಾನ್ಯ ಲಕ್ಷಣ ಬರುತ್ತದೆ. ವಿಶೇಷಲಕ್ಷಣ ಬರುತ್ತಿಲ್ಲ. ಇವು ನಾಲ್ಕನೆಯ ವಿಧದ ಪ್ರಮಾಣಗಳೇ?

2) ಜ್ಞಾನಜ್ಞಾಪಕವಾದ ಶಬ್ದದಲ್ಲಿ ಇಲ್ಲದ ಕೋಡು ಜ್ಞಾತಜ್ಞಾಪಕ ಪ್ರತ್ಯಕ್ಷದಲ್ಲಿ ಏನಿದೆ?

ಹಸಿದವರಿಗೆ ಅನ್ನವನ್ನು ನೀಡಿ.



ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ.

ಭಗವದ್ಗೀತೆ–ವಿಷ್ಣುಸಹಸ್ರನಾಮ–ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ.



(ಮುಂದುವರಿಯುವುದು)

ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ.

# ಶ್ರೀವಿಷ್ಣುಪುರಾಣ

-ಸ್ಫೂರ್ತಿ

ಶ್ರೀ ಮಾಧ್ವಗ್ರಂಥಗಳ ಅಧ್ಯಯನ ನಿಮ್ಮ ಯೋಗ್ಯತೆಗೆ ಸರಿಯಾಗಿ ಮಾಡಿರಿ.



(ಮುಂದುವರಿಯುವುದು)

ಎಷ್ಟೋ ಜನುಮದ ಸುಕೃತದಿಂದ ಪ್ರಾಪ್ತನಾದ ಈ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಿ.

ಪ್ರಶ್ನೋತ್ತರ-ಪದಬಂಧ

# ನೆನಪಿನ ಅಂಗಳ

ವಿ॥ ಶಂಕರನಾರಾಯಣಾಚಾರ್ಯ

**ಕಳೆದ ಸಂಚಿಕೆಯ ಉತ್ತರ:**

1.





ಎಡದಿಂದ ಬಲಕ್ಕೆ:

1. ವೃಕ್ಷದೊಂದಿಗೆ ಕೂಡಿದ ಯುದ್ಧ (3)
4. ಬಗೆಯ ನಡುವೆ ಕಾಮ (3)
5. ಸುರಿಯುವಿಕೆ ಸಂಸ್ಕೃತದಲ್ಲಿ (3)
7. ಗರ್ವದ ವಿರುದ್ಧ ಇಂದ್ರಿಯನಿಗ್ರಹ (2)
9. ರಮೆಯರಸ ಇಲ್ಲಿದ್ದಾನೆ (6)
10. ದೊಡ್ಡವರಲ್ಲಿ ಮಾಡಿಕೊಂಡ ಬೇಡಿಕೆ (3)



ಉತ್ತರ ಮುಂದಿನ ಸಂಚಿಕೆಯಲ್ಲಿ

ಮೇಲಿನಿಂದ ಕೆಳಕ್ಕೆ:

1. ಸಾವಿರ ಮೊಗಗಳುಳ್ಳ (6)
2. ಯೋಗ್ಯರಿಗೆ ಕೊಡುವಂತಹದ್ದು (2)
3. ಕನ್ನಡದ ಕಾಡು (3)
6. ಯುದ್ಧದ ನಡುವೆ ಗಂಡ (3)
8. ಸಂತೋಷವುಳ್ಳವ ಅಂತ್ಯಹ್ರಸ್ವವನ್ನು ಹೊಂದಿದ್ದಾನೆ (3)
10. ಜೇನಿನೊಳಗೆ ಕೈ! ದುಂಬಿಯೋ? (4)
12. ಜಾರಿ ಬೀಳದ ಬುದ್ಧಿವಂತ (2)